Panel of Chairmen

Mr. SPEAKER.—Under Rule 9 of the Rules of Procedure and Conduct of Business in the Mysore Legislative Assembly, I nominate the following members to the Panel of Chairmen for the current session.

Sriyuths :

1 D. M. Siddaiah
2 B. N. Rame Gowda
3 B. P. Kadam
4 K. H. Ranganath

Official Resolution *re*: Ratification to the Constitution (22nd Amendment) Bill, 1969

Sri K. PUTTASWAMY.—Sir I beg to move :

"That this House ratifies the amendments to the Constitution of India falling within the purview of the proviso to article 368 thereof, proposed to be made by the Constitution (Twenty-Second Amendment) Bill, 1969 as passed by the two Houses of Parliament."

Mr. SPEAKER.—Resolution moved:

"That this House ratifies the amendments to the Constitution of India falling within the purview of the proviso to article 368 thereof, proposed to be made by the Constitution (Twenty-Second Amendment) Bill, 1969 as passed by the two Houses of Parliament."

† Sri K. PUTTASWAMY.—Sir, I wish to bring to the notice of this august House the relevant provision of the Indian Constitution under which this ratification is sought. Article 368 deals with the procedure for amendment of the Constitution and it reads thus :

"An amendment of this Constitution may be intitated only by the introduction of a Bill for the purpose in either House of Parliament, and when the Bill is passed in each House by a majority of not less than two-thirds of the members of that House present and voting, it shall be presented to the President for his assent and upon such assent being given to the Bill, the Constitution shall stand amended in accordance with the terms of the Bill."

(SRI K. PUTTASWAMY)

This is one procedure. The other is covered by the proviso under the same Article which says thus :

"Provided that if such amendment seeks to make any change in–

(*a*) article 54, article 55, article 73, article 162 or article 241, or

(*b*) Chapter IV of Part V, Chapter V of Part VI, or Chapter I of Part XI,"

It is under this proviso to article 368 that I am moving this resolution requesting the House to ratify the twenty-second amendment to the Indian Constitution. The matters which fall under the proviso are, article 54 which deals with the election of the President, article 55 which deals with the manner of election of the President, article 73 which deals with the extent of executive power of the Union, article 162 which deals with the extent of executive power of the State, Chapter IV of Part V which deals whith the Union Judiciary, Chapter V of Part VI which deals with High Courts in the States and Chapter I of Part II which deals with the relations between the Union and States. The Seventh Schedule gives the subjects which fall within the purview of the Union Government, the subjects which fall within the purview of the State Governments and the subjects which fall within the purview of the concurrent list. The proviso also deals with the representation of States in Parliament and also the provisions of article 368. If there is any constitutional amendment which falls within the purview of the proviso to article 368, then ratification by one-half of the State Legislatures by resolution to that effect is very necessary before a Bill can be presented to the President for assent. The Parliament has passed the twenty-second amendment to the Constitution as required by article 368.

This amendment seeks to introduce a new article to the Constitution, namely, article 244 A. This article 244 A seeks to confer power on the Parliament to set up an autonomons State within the State of Assam by law. As the twenty-second amendment to the Constitution attracts article 368 of the Constitution, ratification of this Hon. House has become necessary. Therefore, I move that this House do ratify the Constitution (Twenty-Second Amendment) Bill, 1969, as passed by the two Houses of Parliament.

ಶ್ರೀ ಎಂ. ನಾಗಪ್ಪ.—ಮಾನ್ಯ ಅಧ್ಯಕ್ಷರೇ, ಈಗ ನಭೆಯ ಮುಂದೆ ಏನು ರಾಜ್ಯಾಂಗದ 22 ನೆಯ ತಿದ್ದುಪಡಿ ಘಟನೆಯೊಂದು ಬಂದಿದೆ, ಇದು ನಮ್ಮ ರಾಜಕೀಯದಮೇಲೆ ಒಂದು ಹೊಸ ಪರಿಣಾಮವನ್ನು ಬೀರುತ್ತದೆಂಬುದನ್ನು ನಾನು ಒತ್ತಿಹೇಳುತ್ತೇನೆ. ಈ ದಿವಸ ಅ ಅಸ್ಸಾಂ ಎಂಬ ಒಂದು ಸ್ಟೇಟ್ ಏನಿದೆ ಅದು ಸಾಮಾನ್ಯವಾಗಿ ಒಂದು ಗುಡ್ಡಗಾಡುಗಳಿಂದ ಕೂಡಿದ ರಾಜ್ಯವಾಗಿದೆ. ಆ ಅಸ್ಸಾಂ ರಾಜ್ಯವನ್ನು ಗ್ಯಾರೊ ಹಿಲ್ಸ್ ಯುನೈಟೆಡ್ ಖಾಸಿ ಅಂಡ್ ಜೈಂತ್ಯ ಹಿಲ್ಸ್, ದಿ ಯುನೈಟೆಡ್ ಮಿಕೀರ್ ಅಂಡ್ ನಾರ್ತ್ ಕಾಚಾರ್ ಹಿಲ್ಸ್ ಅಂಡ್ ಮಿಜೋ ಹಿಲ್ಸ್

ಇತ್ಯಾದಿ ಪ್ರದೇಶಗಳನ್ನು ಒಳಗೊಂಡಿದೆ. ಇವುಗಳನ್ನು ಒಂದೊಂದು ಜಿಲ್ಲೆಯೆಂದು ನಾವು ಇಟ್ಟುಕೊಳ್ಳಬಹುದು. ಈ ತಿದ್ದುಪಡಿಯ ಮೂಲಉದ್ದೇಶ ಏನೆಂದರೆ ಆ ಅನ್ಯಾಂ ರಾಜ್ಯದೊಳಗೆ ಒಂದು ಮರಿ ರಾಜ್ಯವನ್ನು ಮಾಡಿ ಅಲ್ಲಿ ಒಂದು ಮರಿ ಅಸೆಂಬ್ಲಿಯನ್ನು ಮಾಡುವುದಕ್ಕೆ ಅವಕಾಶ ಮಾಡಿಕೊಡಬೇಕೆಂಬುದು. ಈ ತಿದ್ದುಪಡಿಯ ಪ್ರಕಾರ ಗರಾವ್ ಹಿಲ್ಸ್ ಯುನೈಟೆಡ್ ಖಾಸಿ ಅಂಡ್ ಜಂತೋಹಿಲ್ಸ್ ಜಿಲ್ಲೆಗಳಿಗೆ ಒಂದು ಪ್ರತ್ಯೇಕ ಅಸೆಂಬ್ಲಿಯನ್ನೂ ಮತ್ತು ಒಂದು ಸಣ್ಣ ಕ್ಯಾಬಿನೆಟ್ಟನ್ನೂ ಮಾಡಬಹುದು. ನಮ್ಮ ಮೈನೂರು ರಾಜ್ಯದಲ್ಲಿಯೂ ಈ ದಿವಸ ಹಳೇ ಮೈನೂರನ್ನೂ ಹೊಸ ಮೈನೂರನ್ನೂ ಬೇರೆ ಬೇರೆ ಮಾಡಬೇಕೆಂಬ ಕೂಗು ಕೇಳಿಬರುತ್ತಿದೆ. ಅತ್ತ ಮಹಾರಾಷ್ಟ್ರದಲ್ಲಿ ಕೂಡ ವಿದರ್ಭ ಮತ್ತು ಮರಾಟವಾಡಗಳೆಂದು ರಾಜ್ಯವನ್ನು ವಿಭಜನೆ ಮಾಡಬೇಕೆಂಬ ಕೂಗೆದ್ದಿದೆ. ಆ ಕೇರಳದಲ್ಲಿ ಆ ಮಳಪುರಂ ಜಿಲ್ಲೆಯನ್ನು ಒಂದು ಪ್ರತ್ಯೇಕ ಜಿಲ್ಲೆಯನ್ನಾಗಿ ಮಾಡಬೇಕೆಂಬ ಕೂಗೆದ್ದು ಅಲ್ಲಿ ಗಲಾಟೆಗಳು ನಡೆಯುತ್ತಿವೆ. ಉತ್ತರಪ್ರದೇಶ ಅಲ್ಲಲ್ಲಿ ಆ ಡಾರ್ಜಲಿಂಗನ್ನು ಬೇರೆ ಒಂದು ಪ್ರತ್ಯೇಕ ಜಿಲ್ಲೆಯನ್ನಾಗಿ ಮಾಡಬೇಕೆಂಬ ಕೂಗಿದೆ. ಆಂಧ್ರದಲ್ಲಿ ಆ ತೆಲಂಗಣ್ಣ ಬಗ್ಗೆ ಎದ್ದಿದ್ದರ ಕೂಗನ್ನು ಎಲ್ಲರೂ ಕೇಳಿದ್ದೇವೆ. ಅಲ್ಲಿ ಘೋರ ಹೋರಾಟವೇ ನಡೆಯುತ್ತಿದೆ. ಅಲ್ಲಿ ದಿನಬೆಳಗಾದರೆ ಫೈರಿಂಗ್ ಆಗುತ್ತಿದೆ. ಭಾರತದಲ್ಲಿ ಇಂಥ ಒಂದು ಸಂದಿಗ್ಧಪರಿಸ್ಥಿತಿ ಇರುವಾಗ ಇದನ್ನು ಒಂದು ರಾಜಕೀಯ ದೃಷ್ಟಿಯಿಂದಲೋ ಅಥವಾ ಇನ್ನಾವ ದೃಷ್ಟಿಯಿಂದಲೋ ಇದನ್ನು ತಂದಿದ್ದಾರೆ. ಇದರ ಪರಿಣಾಮವಾಗಿ ನಾಳೆ ನಮ್ಮ ರಾಜ್ಯದಲ್ಲಿ ಒಂದೊಂದು ಜಿಲ್ಲೆಗೂ ಒಂದೊಂದು ಅಸೆಂಬ್ಲಿ ಬೇಕೆಂದು ಕೇಳತಕ್ಕ ಪರಿಸ್ಥಿತಿಯುಂಟಾಗಬಹುದು. ಆದರೆ ನಾವೀದಿವಸ ಇಲ್ಲಿಗೆ ಪೀಪಲ್ಸ್ ರೆಪ್ರೆಸೆಂಟೇಷನ್ ಆಕ್ಟಿನ ಪ್ರಕಾರ ಆರಿಸಿ ಬಂದಿದ್ದೇವೆ. ಈ ತಿದ್ದುಪಡಿಯಿಂದ ನಾಳೆ ಡುಯಲ್ ಕ್ಯಾಪಾಸಿಟಿಯಲ್ಲಿ ಎರಡೂ ಕಡೆಗಳಲ್ಲಿ ಮೆಂಬರುಗಳಾಗಿರುವುದಕ್ಕೆ ಅವಕಾಶವಾಗುತ್ತದೆ. ಆಗ ಇದರಿಂದ ಬಹಳ ವೋನವಾಗುತ್ತದೆ. ಬೇರೆ ಯಾವ ದೇಶದಲ್ಲೂ ಕೇಗಿಲ್ಲ. ಇಂಥ ಒಂದು ತಿದ್ದುಪಡಿಯಿಂದ ದೇಶದಲ್ಲಿ ಅನೈಕಮತ್ಯ ತಲೆಯೆತ್ತುವುದಕ್ಕೆ ತುಂಬಾ ಅನುಕೂಲವಾಗುವುದು. ನಮ್ಮ ರಾಷ್ಟ್ರದ ಯೂನಿಟಿ ಹಾಳಾಗಿ ಇದರಿಂದ ಮುಂದೆ ದೊಡ್ಡ ಹಾನಿ ರಾಷ್ಟ್ರಕ್ಕೆ ಸಂಭವಿಸಬಹುದು. ಈ ಹಿಂದೆ ಭಾರತ ಸರ್ಕಾರದವರು ಎರಡು ರೀಜನಲ್ ಕಮಿಟಿಗಳನ್ನು ಮಾಡಿದ್ದರೂ ಅವಕ್ಕೆ ಸಾಕಷ್ಟು ಅಧಿಕಾರವಿಲ್ಲದೆ ಅಲ್ಲಿ ಪಂಜಾಬು ಹರಿಯಾಣ ಎಂದು ಒಂದನ್ನು ಎರಡು ಪ್ರಾಂತ್ಯಗಳನ್ನಾಗಿ ಮಾಡಿದರು. ಅದಾದಮೇಲೆ ಈಗ ತೆಲಂಗಣ ಸಮಸ್ಯೆ ಎದ್ದಿದೆ. ಸರ್ಕಾರದವರು ಈಗಲಾದರೂ ಪಾಸ್ತ್ರಾಂತಗಳನ್ನು ಅರಿತುಕೊಂಡು ಅವರು ಏನು ಆ ಒಂದು ರೀಜನರ್ ಕಮಿಟಿಗಳನ್ನು ಮಾಡಿದ್ದಾರೆ, ಅವುಗಳಿಗೆ ಸರಿಯಾಗಿ ಅಧಿಕಾರವನ್ನು ನೀಡಿ ಕೆಲಸ ಮಾಡಿದರೆ ಉತ್ತಮವೆಂಬುದಾಗಿ ನನಗನಿಸುತ್ತಿದೆ. ಈ ದಿವಸ ರಾಜ್ಯಾಂಗದ 368ನೆ ಆರ್ಟಿಕಲ್ಲನ್ನು ತಿದ್ದುಪಡಿ ಮಾಡಬೇಕಾದರೆ ಅದಕ್ಕೆ ಮೂರನೆ ಎರಡರಷ್ಟು ಮೈಜಾರಿಟಿ ಬರಬೇಕು. ಅದಕ್ಕಾಗಿ ಈಗ ಅವರು ಅದಕ್ಕೆ ರ್ಯಾಟಿಫಿಕೇಷನ್ ಕೇಳಿದ್ದಾರೆ. ಆಯಾಯ ರಾಜ್ಯಗಳವರು ಅವರ ಅಭಿಪ್ರಾಯವನ್ನು ತಿಳಿಸಬಹುದು. ಇದನ್ನು ಒಪ್ಪಲೇಬೇಕೆಂಬ ಕಡ್ಡಾಯವೇನಿಲ್ಲ. ಇದಕ್ಕೆ ಒಪ್ಪಿಕೊಂಡರೆ ಈ ರಾಜ್ಯ ಕೇಂದ್ರದ ಒತ್ತಾಯಕ್ಕೆ ಬಗ್ಗುತ್ತಿದೆ ಎಂದು ಅರ್ಥವಾಗುತ್ತದೆ. ಅದಕ್ಕೆ ಅವಕಾಶ ಕೊಡಬಾರದು ಅದ್ದರಿಂದ ಇದಕ್ಕೆ ಒಪ್ಪಿಗೆಯನ್ನು ಕೊಡಬಾರದೆಂದು ನಾನು ಎಲ್ಲರನ್ನೂ ಒತ್ತಾಯಪೂರ್ವಕವಾಗಿ ಕೇಳಿಕೊಳ್ಳುತ್ತೇನೆ. ಇದಕ್ಕೆ ಯಾವುದಾದರೂ ಹತ್ತು ರಾಜ್ಯಗಳ ಅಸೆಂಟ್ ಸಿಕ್ಕದಿದ್ದರೆ ಇದು ಪಾಸಾಗುವುದಿಲ್ಲ. ಆದ್ದರಿಂದ ಇದನ್ನು ರ್ಯಾಟಿಫೈ ಮಾಡಬಾರದೆಂದು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

Sri H. SIDDAVEERAPPA.— Sir, I would like to add only a few words and I would not take much time.

Sir, this Bill has been referred to this House for its ratification and its opinion will be placed before the Parliament under the Constitution. According to the provisions of the Constitution 50 per cent of the States have to ratify if this Bill has to become law under the Constitution. Now I am not concerned as to whether it is legally correct to introduce it here or not. It is all perfectly constitutional because there are certain provisions for that, but as regards the spirit of the provision I do not know whether the Cabinet has considered and bestowed any thought to it or whether it has brought it here *makkika makki* without examining the provisions of it. Let us examine what happens. All

(SRI H. SIDDAVEERAPPA)

those things are already spoken of by Members of Parliament in the Lok Sabha. This is what Sri Nambiar of Tiruchirapalli has said in Lok Sabha :

> "We have already supported the spirit of the Bill but we are unable to agree to the Bill as such because of the grounds mentioned in my dissenting note to the report of the Joint Committee. We do not agree to what is known as a sub-State or the concept of an autonomous State which is new to the Constitution of India. If you go through the whole Constitution you will not find the words 'autonomous State' anywhere. They are introducing it today as a new term. If it is an autonomous State, it is autonomous. But according to the provisions of the Bill it is not autonomous at all; it is something like a sub-State, a State within a State with no powers whatsoever. I may be permitted to say that it is an exaggerated panchayat board or district board."

Certain Members of Parliament had envisaged and prophesied some of the difficulties that we are faced with, today: This is what Sri Shri Chand Goyal had said:

> "This Bill if passed, is certainly likely to open up the flood gates of similar demands; may be, from Vidharbha may be from the Kumaon Hills of Uttar Pradesh, may be from Telengana. We are already facing a demand in Kerala for an independent Muslim majority district of Mallapuram. If this Bill is passed, it is only going to strengthen the divisive forces which are raising their ugly heads today."

5-00 P. M.

This is the point I would like to bring home. Why should we ratify, I am asking. This is a matter in which we are vitally interested, unless it be, we are prepared to agree for the spirit or for the ideology of this measure. I personally feel we have had enough of it in our country Unfortunately, the divisive, forces are strong ; they are already becoming more vocal and fissiparous. If you feel that small States will do the work better and more efficiently as in the case of United States of America, where with half the population they have nearly 50 States, it is all right. But, here the concept is different. The fathers of the Indian Constitution never wanted such things to come up. If you see the entire tenor of the Constitution, then the concentration was to maintain the integrity and the indivisibility of India. Now, if we introduce this Bill, tomorrow it will be quoted as an example by other States, and when it is quoted you cannot have any choice. Sri Y. B Chavan, the Union Home Minister has stated that they do not want to introduce these things ; it means the dissolution of various

States. It was stated that in view of the special circumstances in Assam and in view of the historical reasons in the Garo Hills and Naga Hills that they have introduced it. But, we are not going to be lead by this. This need not be quoted as a precedent. That is what he said. In Mysore, many areas may be having their own problems and arguments may be stretched and advanced. Especially in the South, Telangana is already in the melting pot. When such is the position, I would appeal and request the hon. Mover of the Resolution to give the lead, as leader of the Ruling Party, especially the Congress Party, as it is today, I do not know what it will be after 20 years and consider and ponder over it. Let them take it back to their Party and examine, and if they feel that it is in the interest of the country in general and the State of Mysore in particular then let us take a decision, for which we should not have to regret subsequently.

With these few words, I oppose this being ratified.

ಶ್ರೀ ಎಂ. ಎಸ್. ಕೃಷ್ಣನ್.—ಮಾನ್ಯ ಸಭಾಪತಿಯವರೇ, ಈ ಒಂದು ಶಾಸನಾಂಗಕ್ಕೆ ತೆಗೆದುಕೊಂಡು ಬಂದಂತಹ ತಿದ್ದುಪಡಿಯ ಬಗ್ಗೆ ಈಗಾಗಲೇ ನಮ್ಮ ಮಾನ್ಯ ಹಿರಿಯ ಮಿತ್ರರಾದಂತಹ ಶ್ರೀ ಎಚ್. ಸಿದ್ದವೀರಪ್ಪನವರು ಮಾತನಾಡಿ ಅದರ ಬಗ್ಗೆ ಸ್ವಲ್ಪ ಬೆಳಕನ್ನು ಚೆಲ್ಲಿದ್ದಾರೆ. ನಾನೂ ಅದರ ಬಗ್ಗೆ ಎರಡು ವಿಷಯ ಮಾತನಾಡುತ್ತೇನೆ. ಇದರಲ್ಲಿ ಒಂದು ಮುಖ್ಯವಾದ ಅಂಶ ಏನೆಂದರೆ ಈ ಪ್ರಶ್ನೆ ಏಕೆ ಬಂದಿದೆ, ಎಂದು. ಇವತ್ತಿನ ದಿವಸ ನಮ್ಮ ದೇಶದಲ್ಲಿ ಮುಖ್ಯವಾಗಿ ಈ ಅಮೆಂಡ್‌ಮೆಂಟ್ ಬಿಲ್ಲನ್ನು ಪಾಸು ಮಾಡುವಾಗ ನಾವು ಅಸ್ಸಾಮಿನ ಬಗ್ಗೆ ಮಾತ್ರ ಮಾತನಾಡುತ್ತಿದ್ದೇವೆ. ಅಸ್ಸಾಮಿನಲ್ಲಿ ಗ್ಯಾರೊ ಹಿರ್ಲ್ಸ್, ಮಿಜೋ ಹಿಲ್ಸ್ ಹಾಗೂ ಮತ್ತಿತರ ಗುಡ್ಡಗಾಡು ಜನರಿಗೆ ನ್ಯಾಯಂ ಆಡಳಿತ ಕೊಡಬೇಕೆನ್ನುವ ದೃಷ್ಟಿಯಿಂದ, ಅಲ್ಲಿಯ ಜನರು ಕೇಳುತ್ತಿದ್ದಾರೆ, ಅವರಿಗೆ ಪೂರ್ಣ ಅಧಿಕಾರ ಕೊಡಬೇಕು. ಮತ್ತು ಆರ್ಥಿಕವಾಗಿ, ಸಮಾಜಿಕವಾಗಿ, ಮತ್ತು ಸಾಂಸ್ಕೃತಿಕವಾಗಿ ಅವರ ಏಷ್ಟು ಬೆಳೆವಣಿಗೆ ಆಗಬೇಕಾಗಿತ್ತೋ ಅದು ಆಗಲಿಲ್ಲ, ಆದ್ದರಿಂದ ಸರ್ಕಾರದ ನೀತಿ ಬದಲಾವಣೆ ಮಾಡಬೇಕೆಂದು ಅವರು ಒತ್ತಾಯ ತಂದರು, ಮತ್ತು ಅವರು ಶಸ್ತ್ರಾಸ್ತ್ರಗಳಿಂದ ಹೋರಾಟ ಕೂಡ ಮಾಡಿದರು. ಈ ರೀತಿ ಹೋರಾಟ ಮಾಡಿ, ಶಸ್ತ್ರಾಸ್ತ್ರಗಳಿಂದ ಕಾದಾಡಿ, ಈ ಒಂದು ಬಿಲ್ಲನ್ನು ತರುವಂತೆ ಮಾಡಿದ್ದಾರೆ. ಇವತ್ತಿನ ದಿವಸ ನ್ಯಾಯಂ ನಿರ್ಣಯಾಧಿಕಾರವನ್ನು ಕೊಡುವುದು ಅತಿ ಮುಖ್ಯ. ಹಾಗೆ ಕೊಡುವ ಹಾಗಿದ್ದರೆ ಪೂರ್ತಿಯಾಗಿ ಕೊಡಬೇಕು. ನನ್ನ ಅಭಿಪ್ರಾಯದಲ್ಲಿ, ಆ ರೀತಿ ಕೊಟ್ಟಿದ್ದಾರೆಯೋ ಎಂದು ನೋಡಿದರೆ, ಹಾಗೆ ಕೊಟ್ಟಿಲ್ಲ. ಒಂದು ರಾಜ್ಯದೊಳಗೆ ಇನ್ನೊಂದು ರಾಜ್ಯವನ್ನು ಈ ಮಸೂದೆಯಲ್ಲಿ ರಚನೆ ಮಾಡಿದ್ದಾರೆ. ಈ ರೀತಿ ಮಾಡಿದರೆ ಇನ್ನೂ ಕಿತ್ತಾಟ ಹೆಚ್ಚಾಗುತ್ತದೆ. ಇದರಿಂದ ಅನುಕೂಲವಾಗಿದೆ ಎಂದು ಹೇಳುವುದಕ್ಕೆ ಕಷ್ಟವಾಗುತ್ತದೆ. ಹಕ್ಕುಗಳನ್ನು ಪಡೆಯಬೇಕಾದರೆ ನಿಜವಾಗಿಯೂ ಅಧಿಕಾರ ಕೊಡಬೇಕಾಗುತ್ತದೆ. ಅದನ್ನು ಕೊಟ್ಟಿಲ್ಲ. ಆ-ದೃಷ್ಟಿಯಿಂದ ಇದನ್ನು ನಾನು ವಿರೋಧಿಸಬೇಕಾಗುತ್ತದೆ.

ಎರಡನೆಯದು ಏನೆಂದರೆ, ಒಂದು ರಾಜ್ಯದೊಳಗೆ ಇನ್ನೊಂದು ರಾಜ್ಯವು ಹುಟ್ಟಿಕೊಳ್ಳುವುದಕ್ಕೆ ಅವಕಾಶವಾಗುತ್ತದೆ. ಇದೇ ರೀತಿ ಬೇರೆ ಕಡೆಗಳಲ್ಲೂ ಕೂಡ ನಾನಾ ರೀತಿಯ ರೀಜನಲ್ ಇಂಬ್ಯಾಲನ್ಸ್‌ಸ್ ಇವೆ. ಒಂದು ಕಡೆ ಕೈಗಾರಿಕೆ ಇದೆ, ಇನ್ನೊಂದು ಕಡೆ ಇಲ್ಲ. ಇತರ ವಿಷಯಗಳಲ್ಲೂ ಕಾಂಗ್ರೆಸ್ ಸರಕಾರದ ನೀತಿಯಿಂದ ಅನೇಕ ಭಿನ್ನಾಭಿಪ್ರಾಯಗಳು ತಲೆ ಎತ್ತುತ್ತಿವೆ. ಆದ್ದರಿಂದಲೇ ಎರಡು ರಾಜ್ಯಗಳು ಆಗಬೇಕೆಂದು ಕೇಳಿಕೆಗಳು ಬರುತ್ತಿವೆ. ಉದಾಹರಣೆಗೆ ತೆಲಂಗಾಣದ ಸಮಸ್ಯೆ. ಮೈಸೂರನ್ನು ಎರಡು ರಾಜ್ಯ ಆಗಬೇಕೆಂಬುದು ಅವರು ಕೂಡ ಬೇರೆ ರಾಜ್ಯವಾಗಬೇಕೆಂದು ಕೇಳುತ್ತಿದ್ದಾರೆ. ಆದ್ದರಿಂದ ಈ ರೀತಿ ವಿಭಜನೆಯಾಗುವುದಕ್ಕೆ ಹೆಚ್ಚು ಅವಕಾಶಗಳು ದೊರೆಯುತ್ತದೆ. ಮಿಜೋ, ಗ್ಯಾರೊ, ಗುಡ್ಡಗಾಡಿನ ಜನರು ಕೇಳುತ್ತಿರುವ ಹಕ್ಕುಗಳನ್ನೂ ಇವರು ಸರಿಯಾಗಿ ಕೊಡದಿರುವುದರಿಂದ ಇದು ಪರಿಪೂರ್ಣವಾದ ಬಿಲ್ಲಲ್ಲ. ಇದು ಯೋಚನೆ ಮಾಡಬೇಕಾದಂತಹ ಅಂಶ. ಇದರಿಂದಾಗಿ ನಮಗೂ ಧಕ್ಕೆ ಬರುತ್ತದೆ. ಆದ್ದರಿಂದ ಇದನ್ನು ಗಾಢವಾಗಿ ಯೋಚನೆ ಮಾಡಬೇಕೆಂದು ಮಾನ್ಯ ಮುಂತ್ರಿಯವರಲ್ಲಿ ಕೇಳಿಕೊಂಡು ನನ್ನ ಮಾತುಗಳನ್ನು ಮುಗಿಸುತ್ತೇನೆ.

†ಶ್ರೀ ಬೋಳ ರಘುರಾಮ ಶೆಟ್ಟಿ (ಕಾರ್ಕಳ).—ಮಾನ್ಯ ಸಭಾಪತಿಯವರೇ, ಮಾನ್ಯ ಕಾನೂನು ಮಂತ್ರಿಯವರು ನಮ್ಮ ರಾಜ್ಯಾಂಗ ಘಟನೆಗೆ 22ನೆಯ ತಿದ್ದುಪಡಿಯನ್ನು ಈ ಸಭೆ ಒಪ್ಪಬೇಕೆಂದು ಇಲ್ಲಿ ಮಂಡಿಸಿದ್ದಾರೆ. ಮಂಡಿಸಿದಾಗಲೂ, ಈ ತಿದ್ದುಪಡಿ ಏಕೆ ಅಗತ್ಯ ಮತ್ತು ಒಪ್ಪುವಂತಹ ಅವಶ್ಯಕತೆ ಏನು, ಎಂದು ಹೇಳಲಿಲ್ಲ. ನಾನಾದರೂ ತಿಳಿದುಕೊಳ್ಳುತ್ತೇನೆ, ಅವರಿಗಾದರೂ ಕೂಡ ಇದಕ್ಕೆ ಒಪ್ಪಿಗೆ ಕೊಡುವ ಸಮಾಧಾನವಿಲ್ಲವೆಂದು. ಅವರು ಕಾನೂನು ಪ್ರಕಾರ ಪಾರ್ಲಮೆಂಟಿನಲ್ಲಿ ಏನು ಮಾಡಬೇಕಾಯಿತು, ಏನು ಮಾಡಿದೆ, ಬೇರೆ ಬೇರೆ ರಾಜ್ಯದ ಸಭೆಗಳು ಏನು ಮಾಡಬೇಕು, ಅದರ ಪ್ರಕಾರ ಈ ಬಿಲ್ಲನ್ನು ಈ ಸಭೆಯು ಮುಂದಿಟ್ಟಿದ್ದೇನೆಂದು ಹೇಳಿದ್ದಾರೆ. ಆದರೆ ಸಮರ್ಥನೆ ಮಾಡಿಲ್ಲ. ಮುಖ್ಯವಾಗಿ ಘಟನೆಯನ್ನು ತಯಾರು ಮಾಡುವಾಗ ನಾವು ಎಲ್ಲಾ ಜನರಿಗೆ ಸಮಾನತೆಯ ಹಕ್ಕನ್ನು ಕೊಟ್ಟಿದ್ದೇವೆ. ಆದ್ದರಿಂದ ಇವತ್ತಿನ ದಿವಸ ನಮ್ಮ ದೇಶದ ಯಾವ ಜನರಿಗೂ ಕೂಡ ಈ ಒಂದು ಸಮಾನತೆಯ ಹಕ್ಕು ಇರುವಾಗ, ಅವರ ಕೆಲವು ಅವಶ್ಯಕತೆಗೋಸ್ಕರ ಅವರಿಗೆ ಒಂದು ವಿಶಿಷ್ಟ ಹಕ್ಕು ಕೊಡುವುದು ನಮ್ಮ ಘಟನೆಯ ಮೂಲಭೂತ ತತ್ವಗಳಿಗೆ ವಿರುದ್ಧವಾಗುತ್ತದೆ. ನಮ್ಮ ದೇಶದ ಘಟನೆ ಆಗುವಾಗ ಕೆಲವು ರಾಜ್ಯಗಳು ಇದ್ದವು. ಆದರೆ, ಕೆಲವು ಜನರನ್ನು ಸಂತೈಸುವುದಕ್ಕೋಸ್ಕರ ಈ ಒಂದು ಭಾಷಾವಾರು ಪ್ರಾಂತ್ಯಗಳನ್ನು ರಚನೆ ಮಾಡಿದರು. ಅದರಿಂದ ನಮ್ಮ ದೇಶದ ಒಗ್ಗಟ್ಟಿಗೆ, ಬಳವಣಿಗೆಗೆ ಆರ್ಥಿಕ ಅಭಿವೃದ್ಧಿಗೆ ಬಹಳ ಗಂಡಾಂತರವಾಗಿದೆ ಎಂದು ಹಲವು ನುರಿತ ಅನುಭವಿಗಳು ಹೇಳುತ್ತಿದ್ದಾರೆ. ಮಾತ್ರವಲ್ಲದೆ. ಅನೇಕ ಮುತ್ಸದ್ದಿಗಳು ಅದನ್ನು ಬದಲಾವಣೆ ಮಾಡಬೇಕು, ಮತ್ತು ನಮ್ಮ ರಾಜ್ಯಗಳು ಕೇವಲ ಆಡಳಿತ ದೃಷ್ಟಿಯಿಂದ ಇರಬೇಕೆಂಬ ಹೊಸ ಅಭಿಪ್ರಾಯಗಳನ್ನು ಕೊಡುತ್ತಿದ್ದಾರೆ. ಈ ರೀತಿ ಇವತ್ತು ಮಾಡುತ್ತಿರುವುದು ನಮ್ಮ ದೇಶದ ಹಿತದೃಷ್ಟಿಯಿಂದ, ಸರಿಯಲ್ಲ. ಕೆಲವು ಗುಡ್ಡಗಾಡು ಜನರಿಗೆ ಪ್ರತ್ಯೇಕವಾಗಿ ಆಟಾನಮಸ್ ಸ್ಟೇಟ್ ಮಾಡುವುದಕ್ಕೆ ಕೇಂದ್ರ ಸರ್ಕಾರದವರು ಹೋಗಿದ್ದಾರೆ. ಇದು ನಿಜವಾಗಿಯೂ ನಮ್ಮ ದೇಶದ ಸಂರಕ್ಷಣೆಯನ್ನು ಮಾಡುವಂತದಲ್ಲ; ಇದು ನಮ್ಮ ಜನತೆಯ ಒಗ್ಗಟ್ಟನ್ನು ಮಾಡುವುದಿಲ್ಲ. ಯಾರೋ ಕೆಲವರು ಗಲಾಟೆ ಮಾಡಿದ್ದಾರೆ, ಕೆಲವರು ರಾಜಕೀಯ ದೃಷ್ಟಿಯಿಂದ ಚಳವಳಿ ಮಾಡಿದ್ದಾರೆ, ಅಂತವರನ್ನು ಸಂತೈಸುವುದಕ್ಕೋಸ್ಕರ ಇದನ್ನು ತಂದಿದ್ದಾರೆ. ಈ ರೀತಿ ಮಾಡುವಂತದ್ದು ನಮ್ಮ ದೇಶದ ಉನ್ನತಿಗೆ ಬಹಳ ಕೆಡುಕನ್ನ ತರುವಂತದ್ದಾಗಿದೆ. ಆದ್ದರಿಂದ ಈ ಸಭೆ ಅದಕ್ಕೆ ಮನ್ನಣೆ ಕೊಡುವಂತದು ಸರಿಯಲ್ಲ. ನಮ್ಮ ರಾಜ್ಯದಲ್ಲೂ ಹಳೆಯ ಮೈಸೂರು ಬೇರೆ ಆಗಬೇಕೆಂದು ಕೂಗು ಎದ್ದಿದೆ. ಇದಕ್ಕೆ ಒಪ್ಪಿಗೆ ಕೊಟ್ಟರೆ ನಾಳೆ ಆಳುವ ಪಕ್ಷದವರು, ಆ ಸವಾಲು ಬಂದಾಗ ಏನು ಹೇಳುತ್ತಾರೆ?

ಈ ದೃಷ್ಟಿಯಿಂದ ನಮ್ಮಲ್ಲಿಯೂ ಕೂಡ ಬೇರೆ ಬೇರೆ ಗುಂಪುಗಾರಿಕೆ ಇರುವುದರಿಂದ ನಮ್ಮ ರಾಜ್ಯವನ್ನು ಒಡೆಯುವಂತಹ ಕಾನೂನಿಗೆ, ನೀತಿಗೆ ಈ ಸಭೆ ಬೆಂಬಲವನ್ನು ಕೊಟ್ಟಹಾಗೆ ಆಗುತ್ತದೆ. ಆದ್ದರಿಂದ ನಾನು ಮಾನ್ಯ ಕಾನೂನು ಶಾಖೆಯ ಮಂತ್ರಿಗಳಲ್ಲಿ ವಿನಂತಿಸಿಕೊಳ್ಳುತ್ತೇನೆ, ಈಗ ಅವರು ಏನು ತಿದ್ದುಪಡಿಯನ್ನು ಮಂಡಿಸಿದ್ದಾರೆ ಅದನ್ನು ಹಿಂದಕ್ಕೆ ತೆಗೆದುಕೊಳ್ಳಬೇಕು, ಈ ಮಾನ್ಯ ಸಭೆಯವರು ಈ ತಿದ್ದುಪಡಿಗೆ ಮನ್ನಣೆ ಕೊಡಬಾರದು ಎಂದು ಹೇಳಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ಎಚ್. ಎನ್. ನಂಜೇಗೌಡ.—ಸ್ವಾಮಿ, ಈಗ ಈ ಸಭೆಯಮುಂದೆ ತಂದಿರತಕ್ಕ ರಾಜ್ಯಾಂಗದ ಇಪ್ಪತ್ತೆರಡನೆಯ ತಿದ್ದುಪಡಿ ವಿಧೇಯಕ ಏನಿದೆ ಇದನ್ನು ನಾನು ಸ್ವಾಗತಿಸುತ್ತೇನೆ. ಸಾಮಾನ್ಯವಾಗಿ ರಾಜ್ಯಾಂಗಕ್ಕೆ ಪದೇ ಪದೇ ತಿದ್ದುಪಡಿ ತರತಕ್ಕಂಥಾದ್ದು ಒಳ್ಳೆಯದಲ್ಲ ಎಂದು ನಾನು ತಿಳಿದುಕೊಂಡಿದ್ದರೂ ಕೂಡ ಈಗ ಈ ಸಭೆಯಮುಂದೆ ತಂದಿರತಕ್ಕ ತಿದ್ದುಪಡಿಗೆ ಈ ಸಭೆ ಒಪ್ಪಿಗೆ ನೀಡಿ ತನ್ನ ಅನುಮತಿಯನ್ನು ಕೊಡುತ್ತದೆ ಎಂದು ನಾನು ಭಾವನೆ ಮಾಡಿಕೊಂಡಿದ್ದೇನೆ. 1969ನೇ ಏಪ್ರಿಲ್ ತಿಂಗಳಿನಲ್ಲಿ ಲೋಕಸಭೆಯಲ್ಲಿ ಈ ತಿದ್ದುಪಡಿ ವಿಧೇಯಕದ ಮೇಲೆ ಆದಂತಹ ಚರ್ಚೆಯ ಪರಿಪಾಠವನ್ನು ನಾನು ಅವಲೋಕಿಸಿ ನೋಡಿದ್ದೇನೆ. ರಾಜ್ಯಾಂಗ ಜಾರಿಗೆ ಬಂದನಂತರ ಎಲ್ಲರಿಗೂ ಮೆಚ್ಚಿಗೆಯಾದ ತಿದ್ದುಪಡಿ ಇದೊಂದೇ. ಒಳ್ಳೆಯ ಉದ್ದೇಶಕ್ಕೋಸ್ಕರ ಈ ತಿದ್ದುಪಡಿಯನ್ನು ತಂದಿದ್ದಾರೆ ಎನ್ನತಕ್ಕದ್ದು ನನ್ನ ಅಭಿಪ್ರಾಯ. ನಮ್ಮ ರಾಷ್ಟ್ರದಲ್ಲಿ ಈಗ ಇರತಕ್ಕಂಥಾ ರಾಜ್ಯಗಳ ಸಂಖ್ಯೆಯನ್ನು ಹೆಚ್ಚು ಮಾಡಕೂಡದು ಎಂದು ಪ್ರತಿಯೊಬ್ಬರೂ ಹೇಳಿದ್ದಾರೆ. ಇಲ್ಲಿ ಮಾತನಾಡುವಾಗ ಕೆಲವು ಮಾನ್ಯ ಸ್ನೇಹಿತರು ನಮ್ಮ ರಾಜ್ಯದಲ್ಲಿರತಕ್ಕ ಪರಿಸ್ಥಿತಿಯ ಬಗ್ಗೆ ಮತ್ತು ತೆಲಂಗಾಣ ಚಳುವಳಿಯ ಬಗ್ಗೆ ಒಂದು ಪಾಸಿಂಗ್ ರಿಮಾರ್ಕ್ಸ್ ಮಾಡಿದ್ದಾರೆ. ಈ ತಿದ್ದುಪಡಿ ವಿಧೇಯಕಕ್ಕೆ ಸಂಬಂಧಪಟ್ಟ ಹಾಗೆ ಕೇಂದ್ರ ಸರ್ಕಾರದ ಗೃಹ ಮಂತ್ರಿಗಳು ಏನು ಹೇಳಿದ್ದಾರೆಂಬುದನ್ನೆಲ್ಲಾ ನಾನು ಓದಿದ್ದೇನೆ. ಅಸ್ಸಾಮಿನ ಗುಡ್ಡಗಾಡಿನ ಪ್ರದೇಶದ ಜಿಲ್ಲೆಗಳನ್ನು ರಾಜಕೀಯವಾಗಿ, ಸಾಮಾಜಿಕವಾಗಿ, ಆರ್ಥಿಕವಾಗಿ ಉತ್ತಮಪಡಿಸುವುದಕ್ಕೆ ಪ್ರತ್ಯೇಕ ರಾಜ್ಯವನ್ನು

ಮಾಡದೇ ಬೇರೆ ಮಾರ್ಗವಿಲ್ಲ ಎಂಬುದನ್ನು ಮನಗಂಡು ಈ ಒಂದು ತೀರ್ಮಾನವನ್ನು ತೆಗೆದು ಕೊಳ್ಳುವುದಾದರೆ ಅದು ಚೆನ್ನಾಗಿ ನಡೆಯುತ್ತದೆ ಎಂದು ಎಲ್ಲರೂ ಇದನ್ನು ಒಪ್ಪಿ ಮಾಡಿದ್ದಾರೆ. ಹಿಲ್ಸ್ ಏರಿಯಾದಲ್ಲಿರತಕ್ಕ ಜನತೆ ತಮ್ಮ ಉದ್ಧಾರವನ್ನು ಮಾಡಿಕೊಳ್ಳುತ್ತಾರೆ, ಆ ಬಗ್ಗೆ ಅವರು ಹೆಚ್ಚಿನ ಶ್ರಮವನ್ನು ವಹಿಸುತ್ತಾರೆ ಎಂದು ಅವರು ಹೇಳುವಂಥಾದ್ದು ತಪ್ಪಲ್ಲ ಎಂಬುದನ್ನು ಮನಗಂಡು ಆ ಒಂದು ಆಧಾರದ ಮೇಲೆ ಅಸ್ಸಾಂ ರಾಜ್ಯದಲ್ಲಿ ಗಿರಿ ಪ್ರದೇಶ ಜಿಲ್ಲೆಗಳ ರಾಜ್ಯ ರಚನೆಗೆ ಅವಕಾಶ ಮಾಡುವುದಕ್ಕಾಗಿ ಕೇಂದ್ರ ಸರ್ಕಾರದವರು ಈ ಒಂದು ತಿದ್ದುಪಡಿಯನ್ನು ಮಾಡಿದ್ದಾರೆ. ಎಲ್ಲರೂ ಮೆಚ್ಚತಕ್ಕಂಥ ಒಂದು ಕಾರ್ಯವನ್ನು ಅವರು ಮಾಡಿದ್ದಾರೆ. ಈ ದೃಷ್ಟಿಯಿಂದ ಇದನ್ನು ಈ ಸಭೆಯ ಮಾನ್ಯ ಸದಸ್ಯರು ಒಪ್ಪಬೇಕು ಎಂದು ನಾನು ಹೇಳುತ್ತೇನೆ. ಈಗಾಗಲೇ ನಮ್ಮ ರಾಜ್ಯದಲ್ಲಿಯೂ ಕೂಡ ಅದೇ ರೀತಿಯ ಕೆಲವಾರು ಭಾವನೆಗಳು ರೂಪಿತ ವಾಗಿವೆ. ಈ ಬಗ್ಗೆ ಈಗಾಗಲೇ ನಮ್ಮ ಸ್ನೇಹಿತರು ಕೆಲವರು ಕೆಲವು ವಿಚಾರಗಳನ್ನು ಹೇಳಿದ್ದಾರೆ. ಅದು ಸರಿಯೋ ತಪ್ಪೋ ಆ ಬಗ್ಗೆ ಈಗ ನಾನು ಹೇಳುವುದಕ್ಕೆ ಹೋಗುವುದಿಲ್ಲ. ಮೈಸೂರು ರಾಜ್ಯ ಎರಡಾಗಬೇಕು ಎಂದು ನಾನು ರೂಢಿಸಿಕೊಂಡಿಲ್ಲ. ಅಥವಾ ಮೈಸೂರು ರಾಜ್ಯ ಎರಡಾಗಬಾರದು ಎಂಬ ಬಗ್ಗೆಯೂ ನಾನು ರೂಢಿಸಿಕೊಂಡಿಲ್ಲ. ಇಪ್ಪತ್ತು ಏನಾಗಿದೆ ಎಂದರೆ ಕೆಲವಾರು ತಿಂಗಳಿಂದ ನಮ್ಮ ರಾಜ್ಯದಲ್ಲಿಯೂ ಕೂಡ ಪ್ರಾದೇಶಿಕ ಅಸಮತೆಗಳು ಹೆಚ್ಚಿವೆ. ಕೆಲವರು ಹಳೆಯ ಮೈಸೂರಿಗೆ ಅನ್ಯಾಯವಾಗಿದೆ ಎಂದು ಹೇಳುತ್ತಾರೆ. ಇಂಟಿಗ್ರೇಟೆಡ್ ಏರಿಯಾದಲ್ಲಿ ಕೆಲವು ಜಿಲ್ಲೆಗಳಲ್ಲಿ ಅನ್ಯಾಯವಾಗಿದೆ, ತೊಂದರೆಯಾಗಿದೆ ಎಂದು ಕೆಲವರು ಹೇಳುತ್ತಾರೆ. ಗುಲ್ಬರ್ಗಾ ಜಿಲ್ಲೆಯಲ್ಲಿ ಆಗಿರುವಷ್ಟು ಅಭಿವೃದ್ಧಿ ಕಾರ್ಯಗಳು ರಾಯಚೂರು ಜಿಲ್ಲೆಯಲ್ಲಿ ಆಗಿಲ್ಲ ಎನ್ನುವಷ್ಟಕ್ಕಂಥ ದೂರು ಇದೆ. ಈ ರೀತಿಯಾಗಿ ಅನೇಕವಿಧವಾಗಿ ಈ ಒಂದು ಚರ್ಚಾಸ್ಪದವಾದ ವಿಷಯ ಪತ್ರಿಕೆಗಳಲ್ಲಿ ಬಂದಿದೆ. ಮತ್ತು ಆಳುವ ಪಕ್ಷದಲ್ಲಿ ಒಳಗೂ ಮತ್ತು ಹೊರಗೂ ಕೂಡ ಈ ವಿಷಯವನ್ನು ಪ್ರಸ್ತಾಪ ಮಾಡಿದ್ದಾರೆ. ಈ ಬಗ್ಗೆ ಮಾನ್ಯ ಮುಖ್ಯ ಮಂತ್ರಿಗಳು ಪತ್ರಿಕೆಯಲ್ಲಿ ಕೊಟ್ಟಂಥ ಹೇಳಿಕೆಯ ಬಗ್ಗೆ ನಾನು ಪ್ರಾಸಂಗಿಕವಾಗಿ ಒಂದು ಮಾತನ್ನು ಹೇಳುತ್ತೇನೆ. ಮುಖ್ಯ ಮಂತ್ರಿಗಳು ಪತ್ರಿಕೆಯಲ್ಲಿ ಹೇಳಿಕೆಯನ್ನು ಕೊಟ್ಟಮೇಲೆ ಕೆಲವು ಗಂಡಾಂತರಕಾರಿಯಾದ ವ್ಯವಹಾರಗಳು ನಡೆಯುತ್ತಿವೆ.

ಅಧ್ಯಕ್ಷರು.—ಈಗ ಇಲ್ಲಿ ನಡೆಯುತ್ತಿರುವ ಚರ್ಚೆಗೂ, ಮಾನ್ಯ ಸದಸ್ಯರು ಹೇಳುತ್ತಿರುವ ವಿಷಯಕ್ಕೂ ಏನು ಸಂಬಂಧ ಇದೆ ?

ಶ್ರೀ ಎಚ್. ಎನ್. ನಂಜೇಗೌಡ.—ನಾನು ಇದನ್ನು ಏತಕ್ಕೆ ಹೇಳಿದೆ ಎಂದರೆ ಮಾನ್ಯ ಮುಖ್ಯ ಮಂತ್ರಿಗಳು ಈಗ ಎಲ್ಲರೂ ಮೆಚ್ಚತಕ್ಕ ಒಂದು ಕಾರ್ಯವನ್ನು ಮಾಡಬೇಕು. ಪ್ರಾದೇಶಿಕ ಅಸಮತೆಯ ಬಗ್ಗೆ ಪರಿಶೀಲನೆ ಮಾಡಿ ನಿಜಸ್ಥಿತಿಯನ್ನು ತಿಳಿಯಲು ಸರಿಯಾದ ಅಂಕಿ ಅಂಶಗಳನ್ನು ಕೊಡುವುದಿಲ್ಲ ಎನ್ನುವ ಅನುಮಾನ ಬಂದಿದೆ. ಅವರು ಕೊಡುವ ಅಂಕಿ ಅಂಶಗಳು ಸರಿಯಿಲ್ಲ ಎಂದು ನಾನು ತಿಳಿದುಕೊಂಡಿದ್ದೇನೆ. ಈ ದೃಷ್ಟಿಯಿಂದ ಮಾನ್ಯ ಮುಖ್ಯ ಮಂತ್ರಿಗಳು ಸರಿಯಾದ ಅಂಕಿ ಅಂಶಗಳನ್ನು ಕೊಟ್ಟು ಎಲ್ಲರೂ ಮೆಚ್ಚತಕ್ಕಂಥ ಒಂದು ಕಾರ್ಯವನ್ನು ಮಾಡಲಿ ಎಂದು ನಾನು ಸೂಚನೆ ಮಾಡುತ್ತೇನೆ. ಅದಕ್ಕಾಗಿ ಪ್ರಾದೇಶಿಕ ಅಸಮತೆಯ ಬಗ್ಗೆ ಅಂಕಿ ಅಂಶಗಳನ್ನು ಸಂಗ್ರಹಿಸಲು ಒಂದು ಜುಡೀಷಿಯಲ್ ಫ್ಯಾಕ್ಟ್ಸ್ ಫೈಂಡಿಂಗ್ ಕಮಿಟಿಯನ್ನು ನೇಮಕ ಮಾಡಿ ಆ ಕಾರ್ಯವನ್ನು ತಾತ್ಕಾಲಿಕವಾಗಿ ಮಾಡಲು ಕ್ರಮ ಕೈಗೊಳ್ಳಬೇಕೆಂದು ನಾನು ಸೂಚನೆ ಮಾಡುತ್ತೇನೆ. ಈಗ ಈ ಸಭೆಯಲ್ಲಿ ತಂದಿರತಕ್ಕಂಥ ರಾಜ್ಯಾಂಗದ 22 ನೇ ತಿದ್ದುಪಡಿ ವಿಧೇಯಕ ಏನಿದೆ ಇದರಿಂದ ಮುಂದೆ ಎಲ್ಲಾ ರಾಜ್ಯಗಳನ್ನೂ ಒಡೆಯುವುದಕ್ಕೆ ಅವಕಾಶವಾಗುತ್ತದೆ ಎಂದು ಹೇಳಿದರೆ ನಾನು ಅದನ್ನು ಒಪ್ಪುವುದಿಲ್ಲ. ಈಗ ತೆಲಂಗಾಣಕ್ಕೆ ಅನ್ಯಾಯವಾಗಿದೆ ಎನ್ನುವುದಾದರೆ ಆಂಧ್ರವನ್ನು ಎರಡು ರಾಜ್ಯವನ್ನಾಗಿ ಮಾಡುವ ಬದಲು ತೆಲಂಗಾಣವನ್ನು ಆಟಾನಮಸ್ ಸ್ಟೇಟ್ ಮಾಡಿದರೆ ಅದರಿಂದ ತಪ್ಪು ಇಲ್ಲ ಎಂದು ಹೇಳುವುದಕ್ಕೆ ನಾನು ಇಷ್ಟಪಡುತ್ತೇನೆ. ಇಂಥಾದ್ದಕ್ಕೆ ಈ ತಿದ್ದುಪಡಿ ಮಾರ್ಗದರ್ಶನವಾಗಿದೆ. ಇದರಿಂದ ಯಾವ ಅನಾಹುತವೂ ಆಗುವುದಿಲ್ಲ. ಇದು ಶ್ಲಾಘನೀಯವಾಗಿದೆ ಮತ್ತು ಸ್ವಾಗತಾರ್ಹವಾಗಿದೆ, ಇದನ್ನು ಈ ಮಾನ್ಯ ಸಭೆಯವರು ಒಪ್ಪಬೇಕು ಎಂದು ನಾನು ಹೇಳುತ್ತೇನೆ.

Sri B. B. SAYANAK (Belgaum).—**Mr.** Speaker Sir, I am in favour of this Bill because it helps the people of the hill areas to Develop their political personality. But Sir, the conditions in which the Government of India has brought this Bill are not satisfactory and I oppose the tendency and the policy of the Government. The people of these hill

(SRI B. B. SAYANAK)

areas were agitating for a long time and Mr. Pataskar was then appointed as a Commission to go into it and he submitted his report to the Central Government more than four years back. But the Government did not take a decision over that report. There was again a great agitation and then the Government took up consideration of the report of the Pataskar Commission. That is the tendency and the policy of the Central Government which I want to condemn. Whenever there is a firing great agitation and great destruction to the national property, the Government of India has yielded to the agitation and that is worst thing according to me Sir.

Therefore, I want to submit if the Government of India wants to do some justice to any people. They must do it early and once for all. They should not yield to whatever kind of agitation. This should not be the tendency or the policy of the Central Government. I oppose the tendency or the policy which has been adopted by the Central Government. I support wholeheartedly the Bill which has been brought by the Hon. Minister for ratification and I thank the Chair.

ಶ್ರೀ ಎನ್. ಎ. ಜನ್ನೇಗೌಡ (ಪಾಂಡವಪುರ) : ಮಾನ್ಯ ಸಭಾಪತಿಗಳೇ, ಕಳೆದ 1956 ರಿಂದೀಚೆಗೆ ಭಾರತದ ರಾಜ್ಯಾಂಗದ ಇಪ್ಪತ್ತೆರಡನೆಯ ತಿದ್ದುಪಡಿಯ ವಿಧೇಯಕ ಬಂದಿರುವುದನ್ನು ನೋಡಿದರೆ ಈಗತಾನೇ ಹಿರಿಯ ರಾಜಕಾರಿಣಿಗಳಿಗೆ ಜ್ಞಾನೋದಯವಾಗುತ್ತಿದೆ ಎಂದು ಕಾಣುತ್ತದೆ. 1956ರಲ್ಲಿ ಭಾಷಾವಾರು ಪ್ರಾಂತ್ಯಗಳನ್ನು ಮಾಡುವ ಕಾಲದಲ್ಲಿ ಅನೇಕರ ವಿರೋಧ ಇತ್ತು. ಆದರೂ ಕೂಡ ಈ ವಿರೋಧಕ್ಕೆ ಕೆಲವರು ತಿರಾಂಜಲಿ ಕೊಟ್ಟು ಭಾಷಾವಾರು ರಾಜ್ಯಗಳು ರಚನೆಯಾಗುವುದಕ್ಕೆ ಅವಕಾಶ ಮಾಡಿಕೊಟ್ಟರು. ಆ ಕಾಲಕ್ಕೆ ನರ್ದಾರ್ ವಲ್ಲಭಾಯ್ ಪಟೇಲ್ ಅವರು ಸಹ "Champions of linguistic states are assassins of nationalism" ಎಂದು ಎಚ್ಚರಿಕೆ ಕೊಟ್ಟಿದ್ದರು. ಅದನ್ನು ಲೆಕ್ಕಿಸದೆ ಭಾಷಾವಾರು ಪ್ರಾಂತ್ಯಗಳನ್ನು ರಚನೆ ಮಾಡುತ್ತಾ ಬಂದರು. ಆಯಾ ರಾಜ್ಯಗಳ ಆರ್ಥಿಕ ಸ್ಥಿತಿಗತಿಗಳು, ಆಡಳಿತದ ಸ್ಥಿತಿಗತಿಗಳ ಬಗ್ಗೆ ಹೆಚ್ಚಿನ ಸೌಲಭ್ಯಗಳನ್ನು ಒದಗಿಸಿಕೊಡಬೇಕು ಎನ್ನುವ ವಿಚಾರದಲ್ಲಿ ಕೇಂದ್ರ ಸರ್ಕಾರದವರಿಗೆ ಈಗ ಜ್ಞಾನೋದಯ ಉಂಟಾಗಿ ಈ ಒಂದು ರಾಜ್ಯಾಂಗ ತಿದ್ದುಪಡಿಯನ್ನು ಈ ಸಭೆಯ ಮುಂದೆ ಅನುಮೋದನೆಗೆ ತಂದಿದ್ದಾರೆ. ಇದರಲ್ಲಿ ಯಾವ ಒಂದು ಅಭಾಸವೂ ಕಂಡುಬರುವುದಿಲ್ಲ. ಅಲ್ಲದೆ ಇದರಿಂದ ರಾಜಕೀಯ ಅನ್ಯಾಯ ಅನುಭವಿಸುತ್ತಿರುವ ಜನರಿಗೆ ಬಹಳ ಅನುಕೂಲವಾಗುತ್ತದೆ. ಭಾಷಾವಾರು ಪ್ರಾಂತ್ಯಗಳಲ್ಲಿರುವ ಬಹುಮತದವರ ದಬ್ಬಾಳಿಕೆಯನ್ನು ಅಂದರೆ ಅದು ಭಾಷಾ ಅಥವಾ ಜಾತೀಯ ಅಥವಾ ಯಾವದೇ ದಬ್ಬಾಳಿಕೆಯನ್ನು ತಪ್ಪಿಸಲು ಈ ತಿದ್ದುಪಡಿ ಮಸೂದೆ ಒಂದು ಚೆಕ್ ಇದ್ದ ಹಾಗೆ ಆಗುತ್ತದೆ. It is a deterrant on the tyranny of the majority over minority, be it Linguistic, Communal or any tyranny as a matter of fact. ನಾನಾದರೂ ಹೇಳುವುದು ಇಷ್ಟೆ, ಯಾವ ಯಾವ ರಾಜ್ಯಗಳಲ್ಲಿ ಬಹುಮತ ಪುಳ್ಳ ಜನರು ತಮ್ಮ ಅಭೀಪ್ಸೆಗಳನ್ನು ನೆರವೇರಿಸಿಕೊಂಡು ಕೆಲವೊಂದು ಪ್ರದೇಶಗಳ ಜನರಿಗೆ ಅನ್ಯಾಯ ಮಾಡುತ್ತಿದ್ದಾರೋ, ಅಂತಹ ಅನ್ಯಾಯ ಅನುಭವಿಸುತ್ತಿರುವ ಪ್ರದೇಶದ ಜನರಿಗೆ ಈ ತಿದ್ದುಪಡಿ ವಿಧೇಯಕದಿಂದ ಅನ್ಯಾಯವನ್ನು ತಪ್ಪಿಸಿಕ್ಕೊಲು ಒಂದು ಸುವರ್ಣ ಅವಕಾಶ ಸಿಗುತ್ತದೆ ಎಂದು ಹೇಳಿ ಈ ತಿದ್ದುಪಡಿಯನ್ನು ಸ್ವಾಗತಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎನ್. ಹುಚ್ಚಮಾಸ್ತಿ ಗೌಡ.—ಸ್ವಾಮಿ, ನಮ್ಮ ಮುಂದೆ ಇರುವ ಈ ತಿದ್ದುಪಡಿ ಈ ದೇಶದ ಚರಿತ್ರೆಗೆ ಅವಶ್ಯಕವಾದಂತಹ ತಿದ್ದುಪಡಿಯಾಗಿದೆ ಎಂದು ಭಾವಿಸುತ್ತೇನೆ. ಭಾಷಾವಾರು ಪ್ರಾಂತ್ಯಗಳಾದಾಗ ಅವುಗಳಿಂದ ಪರಸ್ಪರ ವಿರೋಧ ಹುಟ್ಟಿ ರಾಷ್ಟ್ರದ ಐಕ್ಯತೆಗೆ ಭಂಗವಾಗುತ್ತದೆಂದು ಕೆಲವರು ವಾದ ಮಾಡಿದ್ದರು. ಅಖಿಲ ಭಾರತದ ಹಿತದೃಷ್ಟಿಯಿಂದ ಆಯಾ ಪ್ರದೇಶಗಳ ಜನರು ತಮ್ಮ ವ್ಯಕ್ತಿತ್ವವನ್ನು ಪೂರ್ಣವಾಗಿ ಬೆಳೆಸಿಕೊಳ್ಳುವುದಕ್ಕೆ ಭಾಷಾವಾರು ಪ್ರಾಂತ್ಯಗಳು ಅವಶ್ಯಕವೆಂದು ಅನೇಕ ಹಿರಿಯರು ಒಪ್ಪಿಕೊಂಡ ಮೇರೆ ಈ ಭಾಷಾವಾರು ಪ್ರಾಂತ್ಯಗಳು ಜಾರಿಗೆ ಬಂದವು. ಭಾಷಾವಾರು ಪ್ರಾಂತ್ಯಗಳು

ಆಗಬೇಕು ಎಂದು ಯಾರು ಇಷ್ಟಪಟ್ಟರೋ ಮತ್ತು ಯಾರು ಕಾರಣಕರ್ತರಾದರೋ ಅಂತಹವರೇ ಈಗ ಈ ರೀತಿ ಮಾಡಿದ್ದು ಸರಿಯಲ್ಲವೇನೋ ಎನ್ನುವ ವಿಚಾರದಲ್ಲಿ ಈ ವಿರೋಧ ವ್ಯಕ್ತಪಡಿಸಿದ್ದಾರೆ. ಅಲ್ಲದೆ ಈಗ ಎರಡು-ಮೂರು ಭಾಷಾ ರಾಜ್ಯಗಳನ್ನು ಸೇರಿಸಿ ಒಂದು ಸಂಯುಕ್ತ ರಾಜ್ಯವನ್ನಾಗಿ ಮಾಡುವುದು ಒಳ್ಳೆಯದು ಎಂದು ಕೆಲವರು ಸಲಹೆ ಕೊಡುತ್ತಿದ್ದಾರೆ. ಈಗ ಅಮೆರಿಕಾ ದೇಶದಲ್ಲಿ ರಾಜ್ಯಗಳನ್ನು ಜನಸಂಖ್ಯೆಯ ಆಧಾರದ ಮೇಲೆ ಒಂದೊಂದು ಗೆರೆ ಎಳೆದು ರಚನೆ ಮಾಡಿದ್ದಾರೆ. ಅದೇ ರೀತಿ ನಮ್ಮ ದೇಶದಲ್ಲಿಯೂ ಕೂಡ ಮಾಡಿದರೆ ಅನುಮತಿ ಬೆಳೆಯುವಾದದು ಎಂದು ಕೆಲವರು ಅಭಿಪ್ರಾಯ ಪಟ್ಟಿದ್ದಾರೆ. ಆದರೆ ಇದು ಅಷ್ಟಾಗಿ ಯಾರ ಗಮನಕ್ಕೂ ಕೂಡ ಬಂದಿಲ್ಲ. ಇವತ್ತಿನ ಪರಿಸ್ಥಿತಿ ಏನಿದೆ ಎಂದರೆ, ಅಸ್ಸಾಂ ರಾಜ್ಯ ಗುಡ್ಡಗಾಡಿನ ರಾಜ್ಯವಾಗಿದೆ. ಈ ರಾಜ್ಯವನ್ನು ಬೇರೆ ರಾಜ್ಯದೊಡನೆ ಸೇರಿಸಿದರೆ ಆ ರಾಜ್ಯದ ಹಿತ ಸಾಧನೆ ಮಾಡುವುದು ಕಷ್ಟವಾಗುತ್ತದೆ, ಏಕೆಂದರೆ ಆ ರಾಜ್ಯಕ್ಕೆ ಸಂಬಂಧಪಟ್ಟಂತೆ ಕೆಲವು ಪ್ರತ್ಯೇಕವಾದಂತಹ ಪ್ರಶ್ನೆಗಳು ಇವೆ. ಅಸ್ಸಾಂ ರಾಜ್ಯದ ಗಿರಿ ಜನರು ತಮಗೆ ಪ್ರತ್ಯೇಕ ರಾಜ್ಯ ಬೇಕು ಎಂದು ದೇಶದ ಮುಂದೆ ತಮ್ಮ ಅಭಿಪ್ರಾಯವನ್ನು ವ್ಯಕ್ತ ಪಡಿಸಿದರು. ಅಸ್ಸಾಂ ರಾಜ್ಯದ ಗಿರಿ ಪ್ರದೇಶಗಳಲ್ಲಿ ಆಡಳಿತವೇ ಇಲ್ಲ ಎಂದು ನಾವು ಕೇಳಿದ್ದೇವೆ. ಆ ಪ್ರದೇಶಗಳಲ್ಲಿ ಸರ್ಕಾರವನ್ನು ನಡೆಸುವುದೇ ಸಾಧ್ಯವಿಲ್ಲ ಎನ್ನುವ ಪರಿಸ್ಥಿತಿ ಇದೆ. ಅದಕ್ಕಾಗಿ ಆ ಜನಗಳ ಹಿತವನ್ನು ಸಾಧಿಸಬೇಕಾದರೆ ಅವರಿಗೇ ಅಧಿಕಾರವನ್ನು ಕೊಟ್ಟು ಅವರ ಮನಸ್ಸನ್ನು ಒಲಿಸಿಕೊಂಡು, ಈ ರಾಷ್ಟ್ರದ ಐಕ್ಯತೆಗೆ ತೊಂದರೆಯಾಗದಂತೆ ಅವರಿಗೆ ಒಂದು ಪ್ರತ್ಯೇಕ ರಾಜ್ಯವನ್ನು ರಚನೆ ಮಾಡಿಕೊಡುವುದು ಒಳ್ಳೆಯದೆಂದು ಕೆಲವರ ಅಭಿಪ್ರಾಯ ಬಂತು. ಆದರೆ ಈ ವಿಚಾರದಲ್ಲಿ ಆ ಜನರೊಡನೆ ರಾಜೀ ಮಾಡಿಕೊಂಡ ಮೂಲಕ ಆ ಜನರಿಗೆ ಪೂರ್ಣ ಸ್ವಯಂ ಆಡಳಿತ ಅಧಿಕಾರವನ್ನು ಕೊಡುವ ಬದಲಾಗಿ ಅಸ್ಸಾಂ ರಾಜ್ಯದೊಳಗೆ ಸ್ವಲ್ಪಮಟ್ಟಿನ ಆಡಳಿತಾಧಿಕಾರವನ್ನು ಕೊಟ್ಟು ಪ್ರತ್ಯೇಕ ರಾಜ್ಯವನ್ನಾಗಿ ಮಾಡಬಾರದೆಂದು ತೀರ್ಮಾನವಾಯಿತು. ಈ ವಿಚಾರದಲ್ಲಿ ಪಾರ್ಲಿಮೆಂಟ್‌ನಲ್ಲಿ ಚರ್ಚೆಯಾಗಿ ಅಲ್ಲಿ ಪಾಸ್ ಕೂಡ ಆಗಿದೆ. ಈ ವಿಷಯದಲ್ಲಿ ರಾಜ್ಯಗಳ ಅಭಿಪ್ರಾಯವನ್ನೂ ಕೂಡ ಕೇಳಬೇಕು ಎನ್ನುವ ಕಾನೂನು, ನಿಯಮ ಇರುವುದರಿಂದ ಈಗ ನಮ್ಮ ಮುಂದೆ ತಂದಿದ್ದಾರೆ. ಇವತ್ತಿನ ದಿವಸ ಮೈಸೂರು ರಾಜ್ಯದಲ್ಲಿಯಾಗಲೀ, ಮಹಾರಾಷ್ಟ್ರ ರಾಜ್ಯದಲ್ಲಿಯಾಗಲೀ, ಆಂಧ್ರ ರಾಜ್ಯದಲ್ಲಿಯಾಗಲೀ ಅಥವಾ ಬೇರೆ ಅನೇಕ ರಾಜ್ಯಗಳಲ್ಲಿರುವ ಜನಗಳಲ್ಲಿ ತಮಗೆ ಪ್ರತ್ಯೇಕವಾದಂಥ ರಾಜ್ಯ ಅವಶ್ಯಕ, ಇಲ್ಲದಿದ್ದರೆ ತಮ್ಮ ತಮ್ಮ ಹಿತಗಳನ್ನು ಸಾಧಿಸಿಕೊಳ್ಳುವುದಕ್ಕೆ ಸಾಧ್ಯವಿಲ್ಲ ಎನ್ನುವ ಅಭಿಪ್ರಾಯ ಕಂಡುಬರುತ್ತಿದೆ. ಮೈಸೂರು ರಾಜ್ಯದಲ್ಲಿ ಹಳೆಯ ಮೈಸೂರಿನವರು ತಾವು ಪ್ರತ್ಯೇಕವಾಗಿದ್ದರೆ ತಮ್ಮ ಹಿತವನ್ನು ಸಾಧಿಸಿಕೊಳ್ಳುವುದಕ್ಕೆ ಸಾಧ್ಯ ಎನ್ನುವ ಅಭಿಪ್ರಾಯ ಬಂದಿದೆ. ಆಂಧ್ರ ರಾಜ್ಯದಲ್ಲಿ ತೆಲಂಗಾಣದ ಜನರು ತಾವು ಪ್ರತ್ಯೇಕವಾಗಿದ್ದರೆ ತಮ್ಮ ಹಿತ ಸಾಧಿಸಿಕೊಳ್ಳುವುದಕ್ಕೆ ಸಾಧ್ಯ ಎನ್ನುವ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಮಹಾರಾಷ್ಟ್ರ ರಾಜ್ಯದಲ್ಲಿ ವಿದರ್ಭದ ಜನರು ತಾವು ಪ್ರತ್ಯೇಕವಾಗಬೇಕೆಂದು ಕೇಳುತ್ತಿದ್ದಾರೆ. ಮತ್ತು ಗುಜರಾತ್ ರಾಜ್ಯದ ಸೌರಾಷ್ಟ್ರದ ಜನರು ತಾವು ಪ್ರತ್ಯೇಕವಾಗಬೇಕೆಂದು ಕೇಳುತ್ತಿದ್ದಾರೆ.

ಶ್ರೀ ಜಿ. ಚಂದ್ರಕಾಂತ್.—ಉತ್ತರ ಪ್ರದೇಶದ ಜನರು ತಮ್ಮ ರಾಜ್ಯ ನಾಲ್ಕು ರಾಜ್ಯಗಳಾಗ ಬೇಕೆಂದು ಕೇಳುತ್ತಿದ್ದಾರೆ.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ನಾನು ಈಗ ಪ್ರತಿಯೊಂದು ರಾಜ್ಯದ ವಿಚಾರವನ್ನು ಹೇಳುವುದಕ್ಕೆ ಇಷ್ಟಪಡುವುವಿಲ್ಲ. ಆದರೆ ಅನೇಕ ಕಡೆಗಳಲ್ಲಿ ಜನರು ತಾವು ಪ್ರತ್ಯೇಕವಿದ್ದರೆ ತಮ್ಮ ಹಿತವನ್ನು ಸಾಧಿಸಿಕೊಳ್ಳುವುದಕ್ಕೆ ಸಾಧ್ಯ ಎನ್ನುವ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಮಾನ್ಯ ಸಾಯಿನತ್ ಅವರು ಈಗ ಹೇಳಿದ ಹಾಗೆ ಈ ವಿಚಾರ ಕೇಂದ್ರ ಸರ್ಕಾರದ ಗಮನಕ್ಕೆ ಬರುವಂತೆ ಮಾಡುವುದಕ್ಕೆ ಕಾನೂನು ಪ್ರಕಾರ ಎಷ್ಟರಮಟ್ಟಿಗೆ ಸಾಧ್ಯ ಎಂಬ ಬಗ್ಗೆ ಅನುಮಾನ ಉಂಟಾಗಿದೆ. ರಾಜ್ಯ ಎರಡು ಭಾಗವಾಗಬೇಕು ಎನ್ನುವ ವಿಚಾರದಲ್ಲಿ ಯಾವುದಾದರೂ ಒಂದು ರಾಜ್ಯದಲ್ಲಿ ಚಳುವಳಿಯ ಮೂಲಕ ಎಷ್ಟು ಆಸ್ತಿ ನಷ್ಟವಾಗುತ್ತದೆ ಎನ್ನುವ ಅಂದಾಜಿನ ಮೇಲೆ ಕೇಂದ್ರ ಸರ್ಕಾರದ ಕಿವಿಗೆ ಮುಟ್ಟುತ್ತಿದೆ ಎಂಬುದು ಅನುಭವದ ಪ್ರಶ್ನೆಯಾಗಿದೆ. ಆಂಧ್ರದಲ್ಲಿ ಅಲ್ಲಿಯ ಸರ್ಕಾರದವರೇ ಕೊಟ್ಟಿರುವ ಲೆಕ್ಕದ ಪ್ರಕಾರ ಇತ್ತೀಚೆಗೆ ನಡೆದ ಚಳುವಳಿಯಲ್ಲಿ 60-70 ಕೋಟಿ ರೂಪಾಯಿಗಳಷ್ಟು ಸಾರ್ವಜನಿಕ ಆಸ್ತಿಗೆ ನಷ್ಟವಾಗಿದೆ ಮತ್ತು ಅನೇಕ ಜನಗಳು ಪ್ರಾಣ ಬಿಟ್ಟಿದ್ದಾರೆಂದು ತಿಳಿದು ಬಂದಿದೆ. ಇಷ್ಟೊಂದು ಆಸ್ತಿ ನಷ್ಟವಾದ ಮೇಲೆ ಈ ಪ್ರಶ್ನೆಯನ್ನು ಬಗೆಹರಿಸುವುದು ಸೂಕ್ತ ಎಂದು ಕೆಲವರು ಅಭಿಪ್ರಾಯಪಟ್ಟಮೇಲೆ ಕೇಂದ್ರ ಸರ್ಕಾರದವರ ಮನಸ್ಸಿಗೆ ಬಂತು. ಆದರೂ ಕಾಂಗ್ರೆಸ್ಸಿನ ಹಿರಿಯರನೇಕರು ಈ ವಿಚಾರಲ್ಲಿ ಅಡ್ಡಿ ಬಂದಿದ್ದಾರೆಂದು ಕೇಳಿದ್ದೇನೆ. ಅಲ್ಲಿ ಇನ್ನೂ ಚಳುವಳಿ ನಿಂತಿಲ್ಲ.

Mr. SPEAKER.—Such references should be avoided. Members should be within the limit and the scope of the business.

ಶ್ರೀ ಎನ್. ಹುಚ್ಚಮಾಸ್ತಿ ಗೌಡ.—ಈಗ ಆಂಧ್ರದಲ್ಲಿ ನಡೆದ ಚಳುವಳಿಯಿಂದ ಸ್ಪಷ್ಟವಾದ ಜನಾಭಿಪ್ರಾಯವನ್ನು ಅಲ್ಲಿನ ಜನ ವ್ಯಕ್ತಪಡಿಸಿದ್ದಾರೆ. ಪಾರ್ಲಮೆಂಟನಲ್ಲಿ ಕೂಡ ಇದರ ಬಗ್ಗೆ ಚರ್ಚೆಯಾಗುವಾಗ ಅಲ್ಲಿರುವ ಮಾನ್ಯ ಸದಸ್ಯರಾದ ಶ್ರೀಮಾನ್ ರಂಗಾರವರು ಹಾಗೂ ಇನ್ನೂ ಅನೇಕ ಸದಸ್ಯರು ಇದರ ವಿಷಯಗಳನ್ನು ಸ್ಪಷ್ಟವಾಗಿ ಚರ್ಚೆ ಮಾಡಿದ್ದಾರೆ. ಇಡೀ ಹಿಂದೂ ಸ್ತಾನದಲ್ಲೇ ಇಂತಹ ಸಣ್ಣ ಸಣ್ಣ ರಾಜ್ಯಗಳನ್ನು ಮಾಡುವುದು ಅಗತ್ಯ ಎಂದು ಅಲ್ಲಿ ಹೇಳಿದ್ದಾರೆ. ಇಂತಹ ವಿಚಾರಗಳನ್ನು ಇಲ್ಲಿ ಹೇಳುವ ಅವಕಾಶ ನಮಗೆ ಸಿಗುವುದಿಲ್ಲ. ನಮ್ಮ ಮೈಸೂರು ರಾಜ್ಯದಲ್ಲಿ ಸುಮಾರು 13ವರ್ಷಗಳಿಂದಲೂ ನಡೆದಿರತಕ್ಕ ವಿಚಾರಗಳನ್ನು ಪೂರ್ಣವಾಗಿ ಅವಲೋಕಿಸಿ ನೋಡಿದರೆ ಇಲ್ಲಿ ಒಂದು ರೀತಿಯ ಜಾತಿಯವಾದ ಬಂದಿರುವುದು ನಮಗೆ ಗೊತ್ತಾಗುತ್ತದೆ. ಇಂತಹ ನನ್ನಿವೇಶದಲ್ಲಿ ಇಂತಹ ಒಂದು ತಿದ್ದುಪಡಿ ತರುವುದು ಅತ್ಯಾವಶ್ಯಕ. ಇಂತಹ ಅವಕಾಶವನ್ನು ನಾವು ಇಲ್ಲಿ ಉಪಯೋಗಿಸಿಕೊಳ್ಳುವುದು ಮತ್ತು ಪಾರ್ಲಮೆಂಟಿನ ಮೂಲಕ ಕೇಂದ್ರದವರ ಗಮನಕ್ಕೆ ತರುವುದು ಅವಶ್ಯಕ. ಇದರ ಬಗ್ಗೆ ಪ್ರೊ. ರಂಗಾ ಏನು ಹೇಳುತ್ತಾರೆಂದರೆ:

5-30 P. M.

"These things have got to be decided in accordance with changing conditions of our country. We need not send out a kind of invitation for demands for more and more States. At the same time, we should not make it too difficult. We should not continue to make it too difficult for ourselves in parliament, for the Government, for the people also, if and when they find it necessary to increase the number of States in certain areas."

Mr. SPEAKER.—The hon. Member may bring a separate resolution on this particular point. On this Resolution it is not relevant.

ಶ್ರೀ ಎನ್. ಹುಚ್ಚಮಾಸ್ತಿ ಗೌಡ —ಹೀಗೆ ಇದರಲ್ಲಿ ಸ್ಪಷ್ಟವಾಗಿ ಹೇಳಿರುವುದರಿಂದ ಈ ದೇಶದಲ್ಲಿ ಐವತ್ತು ಕೋಟಿಗೂ ಮೇಲ್ಪಟ್ಟು ಜನಸಂಖ್ಯೆ ಇರುವ ಕತೆಗಳಲ್ಲಿ ಸಣ್ಣ ಸಣ್ಣ ರಾಜ್ಯಗಳಾಗಿ ಮಾಡಿದರೂ ತೊಂದರೆ ಇಲ್ಲ. ಕೆಲವು ಕಡೆ ಜನಸಂಖ್ಯೆ ಕಡಿಮೆ ಇರಬಹುದು, ಕೆಲವು ಕಡೆ ಹೆಚ್ಚು ಇರಬಹುದು. ಅಮೇರಿಕಾ ದೇಶದಲ್ಲಿ ಒಂದು ಕೋಟಿ ಆಥವಾ ಅರ್ಧ ಕೋಟಿಗಿಂತ ಕಡಿಮೆ ಜನ ಸಂಖ್ಯೆ ಇದ್ದರೂ ಆಥವಾ 30-40 ಲಕ್ಷದಷ್ಟು ಜನಸಂಖ್ಯೆ ಇದ್ದರೂ ಅಲ್ಲಿ ಸಣ್ಣ ಸಣ್ಣ ರಾಜ್ಯಗಳು ಇರುವುದು ಕಂಡು ಬರುತ್ತಿದೆ. ಈ ದೃಷ್ಟಿಯಿಂದ ನಾನು ಹೇಳುವುದು ಸಣ್ಣ ರಾಜ್ಯಗಳಾದರೆ ರಾಷ್ಟ್ರೀಯ ಐಕ್ಯತೆಗೆ ಭಂಗವುಂಟಾಗುತ್ತದೆ ಎನ್ನುವ ವಾದವನ್ನು ನಾನು ಇಲ್ಲಿ ಖಚಿತವಾಗಿ ಅಲ್ಲ ಗೆಳೆಯಲು ಇಷ್ಟಪಡುತ್ತೇನೆ. ಆದರೆ ಇಂದು ನಮ್ಮ ರಾಜ್ಯದಲ್ಲಿ ಕಂಡುಬರುತ್ತಿರುವ ಜಾತೀಯವಾದ ಪ್ರಾದೇಶಿಕ ಅಸಮಾನತೆ ಹೆಚ್ಚಾಗುತ್ತಿರುವುದರಿಂದ ಇಂತಹ ಸಣ್ಣ ರಾಜ್ಯಗಳು ಆಗುವುದು ಅತ್ಯಗತ್ಯ ಎಂದು ನಾನು ಇಲ್ಲಿ ಹೇಳಬಯಸುತ್ತೇನೆ.

ಅಧ್ಯಕ್ಷರು.—ಇವೆರ್ಲಾ ಇದರಲ್ಲೇ ಬರುವುದಿಲ್ಲ. ಇಲ್ಲಿರುವ ನಿರ್ಣಯದ ಬಗ್ಗೆ ತಾವು ಮಾತನಾಡಬಹುದು.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಇದರ ಬಗ್ಗೆ ಜಾಸ್ತಿ ಹೇಳಲು ಇಷ್ಟಪಡುವುದಿಲ್ಲ. ಇಷ್ಟೇ ಅಲ್ಲ ಈ ತಿದ್ದುಪಡಿಯಲ್ಲಿ ಪೂರ್ಣವಾಗಿ ಸ್ಪಯಮಾಡಳಿತ ಇಲ್ಲ ಎಂದು ನನ್ನ ಅಭಿಪ್ರಾಯ. ಇದರಲ್ಲಿ 244 (ಎ) ಸೆಕ್ಷಿ ಹೀಗಿದೆ:

"A body which is elected or a body which is partly elected and partly nominated to function as a legislature for the autonomous State or Council of Ministers."

ಆದುದರಿಂದ ಇಲ್ಲಿ ಪೂರ್ಣವಾದ ಸ್ವಯಮಾಡಳಿತವಾದ ರಾಜ್ಯಗಳು ಇರುವುದು ಅಗತ್ಯ ಮತ್ತು ಇದರ ಜೊತೆಗೆ ಕೌನ್ಸಿಲ್ ಆಫ್ ಮಿನಿಸ್ಟರುಗಳೂ ಇರಬಹುದು. ಆದರೆ ರಾಷ್ಟ್ರೀಯ ಐಕ್ಯತೆಗೆ

ಭಂಗ ಬಾರದಂತೆ ನ್ಯಾಯಮಾಡಲಿತವುಳ್ಳ ರಾಜ್ಯಗಳೂ ಆಗಬೇಕು. ಇಂತಹ ನ್ಯಾಯಮಾಡಲಿತವುಳ್ಳ ರಾಜ್ಯಕ್ಕೆ ನಾಂದಿಯಂತೆ ಇದು ಇತರ ಕಡೆಗಳಲ್ಲೂ ಆಗಬಹುದು ಎಂದು ಭಾವಿಸಿ ನನ್ನ ಬೆಂಬಲವನ್ನು ಈ ತಿದ್ದುಪಡಿಗೆ ಕೊಡಲು ಪ್ರೀತಿಪಡುತ್ತೇನೆ.

†ಶ್ರೀ ಸದಾಶಿವಪ್ಪ ಪಾಟೀಲ್ (ದೇವದುರ್ಗ).—ಸ್ವಾಮಿ ಈ ದಿವಸ ನಮ್ಮ ಮುಂದೆ ಇಟ್ಟಿರುವ ರಾಜ್ಯಾಂಗದ 22 ನೇ ತಿದ್ದುಪಡಿಯನ್ನು ನಾನು ವಿರೋಧಿಸುತ್ತಾ ಕೆಲವು ವಿಚಾರಗಳನ್ನು ಇಲ್ಲಿ ಹೇಳಬೇಕಾಗಿದೆ. ನನ್ನ ಮಿತ್ರರು ರಾಜ್ಯಾಂಗದ ಮತ್ತು ದೇಶದ ಹಿತದೃಷ್ಟಿಯಿಂದ ಚಿಕ್ಕ ರಾಜ್ಯಗಳಾಗಬೇಕು, ಇದರಿಂದ ದೇಶದ ಅಭಿವೃದ್ಧಿಯಾಗುತ್ತದೆ ಎಂದು ಇಲ್ಲಿ ಹೇಳಿದರು. ಇದೀಗತಾನೇ ಮಾತನಾಡಿದ ಒಬ್ಬ ಮಾನ್ಯ ಸದಸ್ಯರು ಈ ದೇಶದಲ್ಲಿ ಜಾತೀಯತೆಯ ಒಂದು ವಾದವನ್ನೂ ಇಲ್ಲಿ ಪ್ರಸ್ತಾಪ ಮಾಡಿದರು. ನನಗನಿಸುವುದು ಹೆಚ್ಚು ಹೆಚ್ಚಾಗಿ ಸಂಸ್ಥಾನಗಳನ್ನು ಮಾಡುವುದು ಅಷ್ಟು ಸರಿ ಕಾಣಿಸುವುದಿಲ್ಲ, ನುವಾರು ಇನ್ನೂರು ವರ್ಷಗಳಿಂದಲೂ ಕಷ್ಟಪಟ್ಟು ಇಂತಹ ಒಂದು ರಾಜ್ಯ ಮಾಡಿರುವಾಗ ಇದನ್ನು ತಾಲ್ಲೂಕುವಾರಾಗಿ ಹಾಗೂ ಸಣ್ಣ ಭಾಗಗಳಾಗಿ ವಿಂಗಡಿಸುವುದು ಎಂದು ಹೇಳುವುದರಲ್ಲಿ ಅರ್ಥವಿಲ್ಲ. ಹಿಂದೆ ನಮ್ಮ ರಾಜ್ಯದಲ್ಲಿ ಗೃಹಮಂತ್ರಿ ಗಳಾಗಿದ್ದ ಸರದಾರ್ ವಲ್ಲಭಾಯಿ ಪಟೇಲರು ಇಡೀ ಹಿಂದೂಸ್ಥಾನದ ಒಂದು ನಕಾಶೆಯನ್ನು ತಯಾರು ಮಾಡಿರುವುದನ್ನು ಪುನಃ ಒಡೆಯಲಿಕ್ಕೆ ಹೋದರೆ ಅದರಿಂದ ಒಗ್ಗಟ್ಟು ಉಳಿಯುವುದಿಲ್ಲ. ಹೀಗಿರುವಾಗ ನಮ್ಮ ಅಣ್ಣ ತಮ್ಮಂದಿರು ಇಲ್ಲಿ ಜಾತೀಯತೆವಾದ ಎಂದು ಹೇಳುತ್ತಾರೆ. ನಮ್ಮದು ಸೆಕ್ಯುಲರ್ ಸ್ಟೇಟು ಎಂದು ಹೇಳುತ್ತಿರುವಾಗ ಇಲ್ಲ ಬೇರೆ ಒಂದು ಸಣ್ಣ ರಾಜ್ಯವಾಗಬೇಕು ಎಂದು ಹೇಳುವುದರಲ್ಲಿ ಅರ್ಥವಿಲ್ಲ. ಇದರಿಂದ ದೇಶದ ಹಿತದೃಷ್ಟಿಗೆ ಧಕ್ಕೆ ಬರುತ್ತದೆ. ಇಂದು ಇಲ್ಲಿ ತಂದಿರುವ ತಿದ್ದುಪಡಿಯಂತೆ ಅನ್ಧ್ರಾಂ ರಾಜ್ಯದಲ್ಲಿ ಹಿಲ್ ಏರಿಯಾಕ್ಕಾಗಿ ಬೇರೆ ಇರಬೇಕು ಎಂದು ಇಲ್ಲ ತಂದಿದ್ದಾರೆ. ಹಿಂದೆ ಎಸ್. ಆರ್. ಸಿ. ಆಗುವ ಕಾಲಕ್ಕೆ ಹಿಂದೂಸ್ಥಾನದಲ್ಲಿದ್ದ ಎಷ್ಟೋ ರಾಜ್ಯಗಳ ಜನರು ನಮಗೆ ಇಂತಹ ಎಸ್. ಆರ್. ಸಿ. ರಿಪೋರ್ಟು ಬೇಡ ಇದರಿಂದ ಏನೂ ಅನುಕೂಲವಾಗುವುದಿಲ್ಲ ಎಂದು ಆಗಲೇ ಹೇಳಿದ್ದರು. ಹಾಗೆ ಎಸ್. ಆರ್. ಸಿ. ರಿಪೋರ್ಟು ಬೇಡ ಎಂದು ಹೇಳಿದರೂ ಏನೋ ಒಂದು ರೀತಿಯ ಅನುಮಾನವಲ್ಲಿ ಹಿಂದೂಸ್ಥಾನದಲ್ಲಿ ಎಷ್ಟೋ ರಾಜ್ಯಗಳಾದವು. ಈಗ ಬೇರೆ ಕರ್ನಾಟಕವಾಗಬೇಕು, ಆಂಧ್ರ ಪ್ರದೇಶದವರು ಬೇರೆಯಾಗಬೇಕು, ಮಹಾರಾಷ್ಟ್ರದವರು ಬೇರೆಯಾಗಬೇಕು, ಹರಿಯಾಣ ಹಾಗೂ ಪಂಜಾಬು ಬೇರೆಯಾಗಬೇಕು, ಎಂದು ಇಲ್ಲಿ ಇಂತಹ ಒಂದು ನಿರ್ಣಯ ಮಾಡಿಕೊಂಡು ಇಂತಹ ಸಣ್ಣ ಸಣ್ಣ ರಾಜ್ಯಗಳಾಗಬೇಕು ಎಂದು ಹೇಳುವುದು ಒಳ್ಳೆಯದಲ್ಲ. ಇವೊತ್ತು ಇಲ್ಲಿ ತಂದಿರುವ ರಾಜ್ಯಾಂಗದ 22 ನೇ ತಿದ್ದುಪಡಿಯಂತೆ ಬೇರೆ ರಾಜ್ಯವಾಗಬೇಕು ಎಂದು ತಂದಿರುವಂತೆ ನಾಳೆ ನಮ್ಮ ಊರಿನಂತೆ ಇರುವ ಸಣ್ಣ ಸಣ್ಣ ಭಾಗಗಳಿಗೂ ಬೇರೆ ರಾಜ್ಯವಾಗಬೇಕೆಂದು ಕೇಳಿಕೆ ಬರಬಹುದು. ಇದರಿಂದ ನಮ್ಮ ದೇಶದ ಜನತೆಯಲ್ಲಿ ಒಗ್ಗಟ್ಟು ಕಡಿಮೆಯಾಗಲು ಅವಕಾಶವಾಗುತ್ತದೆ. ಇದರಿಂದ ನನಗಾದರೂ ಒಂದು ರೀತಿಯ ಭಯ ಕಾಣುತ್ತದೆ. ಆದುದರಿಂದ ಇಲ್ಲಿ ತಂದಿರುವ ಈ 22ನೇ ರಾಜ್ಯಾಂಗದ ತಿದ್ದುಪಡಿಗೆ ನನ್ನ ವಿರೋಧವನ್ನು ಸೂಚಿಸುತ್ತಾ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಕೆ. ಪುಟ್ಟಸ್ವಾಮಿ.—ಸ್ವಾಮೀ ಈ ನಿರ್ಣಯದ ಮೇಲೆ ನಡೆದ ಚರ್ಚೆಯನ್ನು ನಾನು ಕೇಳಿದೆ. ಕೆಲವು ಸದಸ್ಯರು ಇದನ್ನು ವಿರೋಧಿಸಿದರು. ವಿರೋಧಿಸುವುದಕ್ಕೆ ಕಾರಣ ಸಣ್ಣ ಸಣ್ಣ ರಾಜ್ಯಗಳು ಸಾಕಷ್ಟು ಆಗಿರುವಾಗ ಪುನಃ ಆಗುವುದಕ್ಕೆ ಕಾರಣವಿಲ್ಲ ಎಂದು. ಮತ್ತೆ ಕೆಲವರು ಮೈಸೂರು ರಾಜ್ಯವನ್ನು ಒಡೆದು ಇನ್ನೂ ಹೆಚ್ಚು ರಾಜ್ಯಗಳನ್ನು ಮಾಡುವುದಕ್ಕೆ ಇದು ಒಂದು ನಾಂದಿಯಾಗುತ್ತದೆ ಎಂದೂ ಹೇಳಿದರು. ಈ ಕಾರಣದಿಂದ ಇಂದು ಈ ದೇಶವನ್ನು ಒಡೆಯುವುದಕ್ಕೆ ಹೋದರೆ ಇದರಿಂದ ದೇಶದ ಒಗ್ಗಟ್ಟು ಕಡಿಮೆಯಾಗಿ ಅಭಿವೃದ್ಧಿಯಾಗಲು ತೊಂದರೆಯಾಗುತ್ತದೆ ಎನ್ನುವ ಒಂದು ಕಾರಣವನ್ನೂ ಹೇಳಿ ರಾಜ್ಯಾಂಗಕ್ಕೆ ಶಾಸನಬದ್ಧವಾಗಿ ಇಂತಹ ಒಂದು ತಿದ್ದುಪಡಿ ತರುವುದು ಜನತೆಯ ಹಿತದೃಷ್ಟಿಯಿಂದ ಒಳ್ಳೆಯದಲ್ಲ ಎನ್ನುವ ಒಂದು ವಾದವನ್ನು ಹೇಳಿದರು. ನಮ್ಮ ಭಾರತದ ಜನತೆಯ ಹಿತದೃಷ್ಟಿಯಿಂದ ಆಡಳಿತದ ಅನುಕೂಲಗಳಿಗಾಗಿ ಪ್ರಾಂತಗಳನ್ನು ಮಾಡುವುದಕ್ಕೆ ಹೋದರೆ ಇದರಿಂದ ಅನೈತಿಕತೆ ಹೆಚ್ಚಿನಲು ಒಂದು ಕಾರಣವಾಗುತ್ತದೆ ಎನ್ನುವ ಕಾರಣದಿಂದ ಈ ನಿರ್ಣಯ ತರುವುದು ಒಳ್ಳೆಯದಲ್ಲ ಎಂದೂ ಹೇಳಿದರು. ಪಾರ್ಲಮೆಂಟಿನಲ್ಲಿ ಈಗಾಗಲೇ ಒಪ್ಪಿರತಕ್ಕ ರಾಜ್ಯಾಂಗದ 22ನೇ ತಿದ್ದುಪಡಿಯನ್ನು ನಾವು ಒಪ್ಪುವುದು ಒಳ್ಳೆಯದಲ್ಲ ಎನ್ನುವ ಒಂದು ವಾದ ಕೂಡ ಬಂತು.

ಎರಡನೆಯದಾಗಿ ಸಣ್ಣ ರಾಜ್ಯಗಳು ಇದರೆ ತೊಂದರೆಯೇನೂ ಆಗುವುದಿಲ್ಲ. ಹಲವು ರಾಜ್ಯಗಳಲ್ಲಿ ಅಲ್ಲಲ್ಲಿ ಅಸಮಾಧಾನ ಇದೆ. ಬೇರೆ ಬೇರೆಯಾಗಬೇಕೆಂಬ ಸೊಲ್ಲು ಇದೆ. ತೆಲಂಗಾಣದಲ್ಲಿ ದೊಡ್ಡ ಚಳುವಳಿ ಆಗುತ್ತಾ ಇದೆ. ಮೈಸೂರಿನಲ್ಲೂ ಕೂಡ ಹಳೇ ಮೈಸೂರು ಬೇರೆ ಆಗಬೇಕು

(ಶ್ರೀ ಕೆ. ಪುಟ್ಟಸ್ವಾಮಿ)

ಅನ್ನುವ ಸೊಲ್ಲು ಎದ್ದಿದೆ. ಈ ಕಾರಣದಿಂದ ಈ ಒಂದು ತಿದ್ದುಪಡಿಯನ್ನು ಒಪ್ಪುವುದರಿಂದ ಯಾವುದೂ ನಷ್ಟವಾಗುವುದಿಲ್ಲ, ಅದಕ್ಕೆ ಬದಲಾಗಿ ಜನತೆಯ ಹಿತಸಾಧನೆ ಆಗುವುದೂ ಕೂಡ ಕಂಡು ಬರುತ್ತದೆ, ಮುಂದೆ ಬರುವುದಕ್ಕೆ ಇದು ಒಂದು ನಾಂದಿಯೆಂದು ಕೆಲವರು ಸ್ವಾಗತಿಸಿದ್ದಾರೆ.

ಸ್ವಾಮಿ, ಈ ರಾಜ್ಯಾಂಗದ ಶಾಸನವನ್ನು ನೋಡಿದರೆ, ಈ ತಿದ್ದುಪಡಿಯನ್ನು ಓದಿದರೆ ಸ್ಪಷ್ಟವಾಗಿ ಗೊತ್ತಾಗುತ್ತದೆ. ಈ ಎರಡು ಅಭಿಪ್ರಾಯಗಳೂ ಕೂಡ ಸರಿಯಾದುದಲ್ಲ. ಆಸ್ಸಾಮಿನ ಗುಡ್ಡಗಾಡಿನ ಪರಿಸ್ಥಿತಿಗೂ, ನಮ್ಮ ದೇಶದ ಇತರ ರಾಜ್ಯಗಳಲ್ಲಿರತಕ್ಕಂಥ ಪರಿಸ್ಥಿತಿಗೂ ಅಜಗಜಾಂತರ ವ್ಯತ್ಯಾಸ ಇದೆ. ಯಾವ ಹೋಲಿಕೆಯೂ ಆಗುವುದಿಲ್ಲ ಅಲ್ಲದೆ ಇದು ಏನೂ ಹೊಸದಲ್ಲ. ಮಾನ್ಯ ಸದಸ್ಯರು ರಾಜ್ಯಾಂಗದ ಶಾಸನವನ್ನು ಓದಿದರೆ ಸ್ಪಷ್ಟವಾಗಿ ಗೊತ್ತಾಗುತ್ತದೆ. ಈ ರಾಜ್ಯಾಂಗವ ಶಾಸನವನ್ನು ಮಾಡಿದಾಗಲೂ ಕೂಡ ಅಲ್ಲಲ್ಲಿ ಕೇಳಿರತಕ್ಕಂಥ ವಿಶಿಷ್ಟ ಪರಿಸ್ಥಿತಿಯನ್ನು ಗಮನಕ್ಕೆ ತೆಗೆದುಕೊಂಡು ಈ ರಾಜ್ಯಾಂಗ ಶಾಸನವಾದದ್ದು. ಕೆಲವಾರು ಸೌಲಭ್ಯಗಳನ್ನೂ ಕೂಡ ಆ ಭಾಗಕ್ಕೆ ಕೊಟ್ಟಿದೆ. ಇದು ಸ್ವಯಮಾಡಳಿತದಿಂದ ಕೂಡಿದ ಒಂದು ಭಾಗ ಮಾಡುವುದಕ್ಕೆ ಈ ಮನೂದೆ ಅವಕಾಶ ಕೊಡುತ್ತದೆ. ಅಲ್ಲದೆ ಈಗ ರಾಜ್ಯಾಂಗ ಶಾಸನದಲ್ಲಿ ಅಟಾನಮಸ್ ಡಿಸ್ಟ್ರಿಕ್ಟ್ ಎಂದು ಒಪ್ಪಿಕೊಂಡು, ಅದಕ್ಕೆ ಬೇಕಾದಂಥ ಕೆಲವು ರಾಜ್ಯಾಂಗದ ನಿಯಮಾವಳಿಗಳನ್ನು ಈ ರಾಜ್ಯಾಂಗ ಶಾಸನದ ಆರನೇ ಷೆಡ್ಯೂಲ್‌ನಲ್ಲಿ ಕೊಟ್ಟಿದೆ. ಮಾನ್ಯ ಸದಸ್ಯರಿಗೆ, ಈ ಸಭೆಯ ಅವಗಾಹನೆಗೆ ರಾಜ್ಯಾಂಗ ಶಾಸನದ ಆರ್ಟಿಕಲ್ಸ್ 244 ನ್ನು ತರುವುದಕ್ಕೆ ಅಪೇಕ್ಷೆ ಪಡುತ್ತೇನೆ. ಈ ಷೆಡ್ಯೂಲ್‌ನಲ್ಲಿ ಪ್ರೊವಿಬಲ್ ಏರಿಯಾಸ್ ಎಂದು ಇದೆ. ಅಲ್ಲಿ ಇಂತಹ ಪರಿಸ್ಥಿತಿ ಇದೆ. ಆ ಪರಿಸ್ಥಿತಿಯನ್ನೂ ಮನಗಂಡು ಅದಕ್ಕೆ ಅವಶ್ಯಕವಾದಂಥ ತಿದ್ದುಪಡಿಯನ್ನು ರಾಜ್ಯಾಂಗದಲ್ಲಿ ಶಾಸನ ಮಾಡುವುದಕ್ಕೆ ಯಾರೂ ತಿರಸ್ಕಾರ ಮಾಡುವುದಿಲ್ಲ. ಅದು ಅವಶ್ಯಕ ಎಂದು ಕಂಡುಬರುತ್ತದೆ. ಮಾನ್ಯ ಸದಸ್ಯರ ಗಮನದಲ್ಲೂ ಇರಬಹುದು. 1956 ರಲ್ಲಿ ರಾಜ್ಯ ಪುನರ್ವಿಂಗಡಣೆಯಾದ ಮೇಲೆ ನಾಗಾಲ್ಯಾಂಡ್ ಆಗಿರುವುದು ಅನೇಕರ ಸ್ಮೃತಿಪಥದಲ್ಲಿ ಇರಬಹುದು. ಅದಾದ ಮೇಲೆ ದೊಡ್ಡದಾದ ರಾಜ್ಯ ಬೊಂಬಾಯಿ ಪ್ರಾಂತ್ಯ ಎರಡಾದದ್ದು ಕೂಡ ಅನೇಕರ ಸ್ಮೃತಿಪಥದಲ್ಲಿ ಇರಬಹುದು. ಅದೇ ರೀತಿ ಪಂಜಾಬು, ಹರಿಯಾಣ ವಿಭಾಗವಾದದ್ದೂ ಎಲ್ಲರಿಗೂ ತಿಳಿದ ವಿಚಾರವಾಗಿದೆ. ಹಾಗೆ ಅಲ್ಲಿ ವಿಭಾಗ ಮಾಡುವ ಪರಿಸ್ಥಿತಿಗೆ ಅವಕಾಶವಾಗುತ್ತದೆ; ಏನೂ ಅಡಚಣೆ ಇರುವುದಿಲ್ಲ, ಇದು ಒಂದಲ್ಲ ಒಂದು ರೀತಿಯಲ್ಲಿ ನಾಂದಿಯಾಗುತ್ತದೆ ಎಂದು ಹೇಳಿದರೆ ಅದು ಶುದ್ಧಾಂಗ ತಪ್ಪು ಎಂದು ನನ್ನ ಅಭಿಪ್ರಾಯ.

ಈ ರಾಜ್ಯಾಂಗದ ಆರ್ಟಿಕಲ್ 244 (2) ನೇ ಭಾಗದಲ್ಲಿ Provisions as to the Administration of the Tribal Areas in Assam ಎನ್ನುವುದನ್ನು ಸೇರಿಸಿದೆ. ಈ ಸಭೆಯ ಗಮನಕ್ಕೆ ಇದನ್ನು ತರುವ ಉದ್ದೇಶ ವಿಶೇಷ ಪರಿಸ್ಥಿತಿ ಇರುವ ಕಡೆ ರಾಜ್ಯಾಂಗ ಶಾಸನ ಮಾಡುವಾಗ 1949 ರಲ್ಲೇ ಆ ಪರಿಸ್ಥಿತಿಯನ್ನು ಮನಗಂಡು 1956 ನೇ ಜನವರಿ 26 ರಲ್ಲಿ ಜಾರಿಗೆ ಬಂದಂಥ ಈ ರಾಜ್ಯಾಂಗ ಶಾಸನದಲ್ಲೇ ಅದನ್ನು ಅಡಕ ಮಾಡಿದ್ದಾರೆ. ತಾವು ಆರನೆಯ ಷೆಡ್ಯೂಲ್ ನೋಡಿದರೆ ಯಾವ ಯಾವ ಭಾಗಗಳು ಎನ್ನುವುದು ಗೊತ್ತಾಗುತ್ತದೆ, ಯಾವ ಯಾವ ಜಿಲ್ಲೆಗಳು ಸೇರಬೇಕು ಎನ್ನುವುದೂ ಸ್ಪಷ್ಟವಾಗಿದೆ. ಆ ಜಿಲ್ಲೆಗಳ ಹೆಸರನ್ನೂ ಮಾನ್ಯ ಸದಸ್ಯರಿಗೆ ಇಲ್ಲಿ ಓದಿ ಹೇಳಿದ್ದೇನೆ. ಅದು ಯಾವುವು ಎಂದರೆ—

1. The United Khasi-Jaintia Hills District.
2. The Garo Hills District.
3. The Mizo District.
4. * * * *
5. The North Cachar Hills.
6. The Mikir Hills.

ಈ ಐದು ಅಟಾನಮಸ್ ಡಿಸ್ಟ್ರಿಕ್ಟ್‌ಸ್ ಸ್ವಯಮಾಡಳಿತ ಇರತಕ್ಕಂಥ ಜಿಲ್ಲೆಗಳು. ಇದರಲ್ಲಿ ಕೆಲವು ಜಿಲ್ಲೆಗಳು ಸೇರಿ ಸ್ವಯಮಾಡಳಿತ ಇರತಕ್ಕಂಥ ಒಂದು ಸಣ್ಣ ರಾಜ್ಯವನ್ನು ಮಾಡುವುದಕ್ಕೆ, ಅಸ್ಸಾಂ ರಾಜ್ಯದ ಒಳಗಡೆ ಒಂದು ಸಣ್ಣ ರಾಜ್ಯ ಮಾಡುವುದಕ್ಕೆ ಈ ತಿದ್ದುಪಡಿ ಅವಕಾಶ ಕೊಡುತ್ತದೆ ಎಂದು ಇದನ್ನು ತಂದಿದ್ದಾರೆ. 6 ನೇ ಷೆಡ್ಯೂಲ್‌ನಲ್ಲಿ ಈ ಅಟಾನಮಸ್ ಡಿಸ್ಟ್ರಿಕ್ಟ್‌ಸ್‌ಗೆ

ಏನೇನು ಪವರ್ಸ್ ಕೂಡ ಕೊಟ್ಟಿದ್ದಾರೆ ಎನ್ನುವುದು ಅದರಲ್ಲಿ ಸ್ಪಷ್ಟವಾಗಿ ಗೊತ್ತಾಗುತ್ತದೆ. Powers of the District Councils and Regional Councils to make laws. ನಮ್ಮಲ್ಲಿರತಕ್ಕಂಥ ಜಿಲ್ಲಾಬೋರ್ಡ್, ಮತ್ತು ತಾಲ್ಲೂಕು ಮಟ್ಟದಲ್ಲಿರತಕ್ಕಂಥ ತಾಲ್ಲೂಕು ಬೋರ್ಡ್‌ಗಳ ಹಾಗಲ್ಲ. ಅಲ್ಲಿರುವ ಡಿಸ್ಟ್ರಿಕ್ಟ್‌ಗಳಿಗೆ ಈ ಸ್ವಯಮಾಡಳಿತದಿಂದ ಕಾನೂನು ಮಾಡತಕ್ಕ ಅಧಿಕಾರ ಕೊಟ್ಟಿದೆ. ಅದೇ ರೀತಿ ತಾಲ್ಲೂಕುಗಳಿಗೂ ಕಾನೂನು ಮಾಡತಕ್ಕಂಥ ಅಧಿಕಾರ ಕೊಟ್ಟಿದೆ. ಈಗಾಗಲೇ ನನ್ನ ಅಭಿಪ್ರಾಯದಲ್ಲಿ ಈಗ ಇರತಕ್ಕಂಥ ಐದು ಆಟಾನಮಸ್ ಜಿಲ್ಲೆಗಳನ್ನು ಒಂದುಗೂಡಿಸುವುದಕ್ಕೆ ಅವಕಾಶ ಮಾಡತಕ್ಕಂಥ ಈ ಒಂದು ತಿದ್ದುಪಡಿಯನ್ನು ತಂದಿದ್ದಾರೆ. ಅಲ್ಲದೆ ಈ ಸಂಬಂಧದಲ್ಲಿ ಇನ್ನೂ ಹೆಚ್ಚು ಅಧಿಕಾರವನ್ನು ಕೊಡಬೇಕು, ಮತ್ತು Administration of Justice in Autonomous districts and Autonomous regions ಎಂದು ಇದೆ. ಅಲ್ಲಿ ನ್ಯಾಯವನ್ನು ನಿರ್ವಹಿಸುವಂಥ ಕಾನೂನನ್ನು ಈ ಐದು ಜಿಲ್ಲೆಗಳಿಗೆ ಕೊಟ್ಟಿದ್ದಾರೆ. ಹಾಗೆಯೇ Conferment of powers under the Code of Civil Procedure, 1908, and the Code of Criminal Procedure, 1898, on the Regional and District Councils and on certain courts and officers for the trial of certain suits, cases and offences ಇದೆ. ಇನ್ನು Powers of the District Council to establish primary schools, etc.—ಈ ರೀತಿ ಪ್ರೈಮರಿ ಸ್ಕೂಲ್‌ಗಳನ್ನು ಮುಂಜೂರು ಮಾಡುವುದಕ್ಕೂ ಅಧಿಕಾರ ಇದೆ. ಅದಕ್ಕೆ ಡಿಸ್ಟ್ರಿಕ್ಟ್ ಅಂಡ್ ರೀಜಿನಲ್ ಫಂಡ್ಸ್‌ನಿಂದ, ಬೇರೆ ಫಂಡ್ಸ್‌ನಿಂದ ಹಣ ಕೊಡುವ ಅಧಿಕಾರ ಇದೆ. ಇನ್ನು Powers to assess and collect land revenue and to impose taxes ಎಂದು ಇದೆ. ಈ ರೀತಿ ತೆರಿಗೆ ಹಾಕುವುದು, ಮತ್ತು ತೆರಿಗೆ ವಸೂಲ್ಮಾಡುವುದಕ್ಕೆ ಅಧಿಕಾರವೂ ಇದೆ. ಇನ್ನು Licences or leases for the purpose of prospecting for, or extraction of, minerals ಎಂದು ಇದೆ. ಸಾಮಾನ್ಯವಾಗಿ ರಾಜ್ಯಕ್ಕೆ ಇರತಕ್ಕಂಥ ಅಧಿಕಾರವನ್ನು ಈ ಆಟಾನಮಸ್ ಜಿಲ್ಲೆಗಳಿಗೆ ಕೊಟ್ಟಿದ್ದಾರೆ. ಇನ್ನು Power of District Council to make regulations for the control of money-lending and trading by non-tribals ಎಂದು ಇದೆ. ಈ ಒಂದು ಕಾನೂನಿನಿಂದ ಲೇವಾದೇವಿ ಮಾಡುವುದಕ್ಕೂ ಕೂಡ ಅವಕಾಶ ಇದೆ. ಹಾಗೆಯೇ ಜಿಲ್ಲಾ ಬೋರ್ಡುಗಳನ್ನು ಡಿಸಾಲ್ವ್ ಮಾಡುವುದಕ್ಕೂ ಅವಕಾಶ ಇದೆ. ಹಾಗೆಯೇ ಸಾಮಾನ್ಯವಾಗಿ ಈ ಐದು ಸ್ವಯಮಾಡಳಿತದ ಜಿಲ್ಲೆಗಳಿಗೆ ರಾಜ ನಿರ್ವಹಣೆ ಮಾಡತಕ್ಕಂಥ ಅನೇಕ ಅಧಿಕಾರಗಳನ್ನೂ ಈಗಾಗಲೇ ಕೊಟ್ಟಿದೆ. ಅಲ್ಲಿಯ ಪರಿಸ್ಥಿತಿ ನಮ್ಮ ಪರಿಸ್ಥಿತಿಗಿಂತ ವಿಭಿನ್ನವಾದುದು. ಅಲ್ಲಿರತಕ್ಕಂಥ ಗುಡ್ಡಗಾಡಿನ ಜನರು ಆಗಾಗ್ಗೆ ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ಹೋಗುತ್ತಾರೆ. ಯಾವುದೋ ಕಾಡನ್ನು ಕಡಿದು ಭೂಮಿಯನ್ನು ಹದಮಾಡಿ ವ್ಯವಸಾಯ ಮಾಡಿರುತ್ತಾರೆ. ಆದರೆ ಕೆಲವು ವರ್ಷವಾದ ಮೇಲೆ ಹಾಗೆಯೇ ಬಿಟ್ಟು ಬೇರೆ ಸ್ಥಳಗಳಲ್ಲಿ ನೆಲೆನುವುದು ಅವರಲ್ಲಿ ಬಂದಿರತಕ್ಕಂಥ ಪದ್ಧತಿ. ಅದಕ್ಕನಗುಣವಾಗಿ ಈಗ ರಾಜ್ಯದಲ್ಲಿ 5 ಜಿಲ್ಲೆಗಳಲ್ಲಿ ಸ್ವಯಮಾಡಳಿತ ಅಧಿಕಾರ ಇದೆ. ಆ ಸ್ವಯಮಾಡಳಿತ ಅಧಿಕಾರ ಸಾಲದು, ಇನ್ನೂ ಆ ಅಧಿಕಾರವನ್ನು ಹೆಚ್ಚಿಸಬೇಕು. ಆ ಅಧಿಕಾರದ ಜೊತೆಗೆ 5 ಜಿಲ್ಲೆಗಳನ್ನೂ ಒಟ್ಟುಗೂಡಿನುವುದಕ್ಕೆ ಅವಕಾಶವೂ ಇರಬೇಕು ಎನ್ನುವ ಈ ಒಂದು ಒತ್ತಾಯವೂ ಆಯಿತು. ಅದಕ್ಕೆ ಬೇಕಾದಷ್ಟು ಚಳುವಳಿಯೂ ನಡೆಯಿತು. ಆ ರೀತಿ ಚಳುವಳಿ ನಡೆದ ಮೇಲೆ ಪಾಟ್ಸನ್ಕರ್ ಸಮಿತಿ ನೇಮಿಸಿದರು. ಆ ಸಮಿತಿಯ ವರದಿಯನ್ನೂ ಕೂಡ ಉಭಯ ಪಕ್ಷಗಳು ಒಪ್ಪದೇ ಹೋದದ್ದು, ಅನ್ಯಾಯಿನ ಗುಡ್ಡಗಾಡಿನ ಜನರು ಒಪ್ಪದೇ ಇದ್ದುದೂ ನಿಮಗೆಲ್ಲಾ ಗೊತ್ತಿದೆ. ಅಲ್ಲಿಯ ಜನರಲ್ಲಿ ಒಮ್ಮತವನ್ನು ರೂಢಿಸುವುದಕ್ಕೆ ಇಂಡಿಯಾ ಸರ್ಕಾರದವರು ಪ್ರಯತ್ನ ಮಾಡಿ ಕೊನೆಗೆ ಅದರಲ್ಲಿ ಯಶಸ್ವಿಯಾಗಿದ್ದಾರೆ. ಈಗ ಸಧ್ಯದಲ್ಲಿ ಅವರಲ್ಲಿ ಒಪ್ಪಂದವಾಗಿರುವುದು ಎರಡು ಜಿಲ್ಲೆಗಳನ್ನೂ ಒಟ್ಟುಗೂಡಿಸಿ ಸ್ವಯಮಾಡಳಿತವಾಗಿ ಉಳಿಯುವಂಥ ಒಂದು ಭಾಗವನ್ನು ಅನ್ಯಾಂ ರಾಜ್ಯದ ಒಳಗೇ ಉಳಿಯುವಂಥ ಒಂದು ಒಳ ರಾಜ್ಯವನ್ನು ಮಾಡುವುದಕ್ಕೆ ಒಪ್ಪಿದ್ದಾರೆ. ಮತ್ತು ಇನ್ನು ಉಳಿದ ಜಿಲ್ಲೆಗಳಿಗೂ ಕೂಡ ಕಾಲಕ್ರಮೇಣ ಅವರು ಅಪೇಕ್ಷೆಪಟ್ಟರೆ ಸೇರಿಸಿಕೊಳ್ಳುವುದಕ್ಕೆ ಅವಕಾಶ ಮಾಡಿದ್ದಾರೆ. ಈ ಸಭೆಯ ಗಮನಕ್ಕೆ ತರಬೇಕಾದರೆ ಇಂಡಿಯಾ ದೇಶದಲ್ಲಿ ಬೇರೆ ಬೇರೆ ರಾಜ್ಯಗಳಲ್ಲಿರತಕ್ಕಂಥ ಪರಿಸ್ಥಿತಿಗೂ, ಗುಡ್ಡಗಾಡಿನ ಜನರು ವಾಸಿಸತಕ್ಕಂಥ ಪರಿಸ್ಥಿತಿಗೂ ಬೇಕಾದಷ್ಟು ವ್ಯತ್ಯಾಸ ಇದೆ. 1947 ರಿಂದ ಈ ದೇಶ ಸ್ವಾತಂತ್ರ್ಯ ಆಗುವುದಕ್ಕೆ ಹಿಂದೆಯೂ ಕೂಡ ಇರತಕ್ಕಂಥ ವಿಶಿಷ್ಟವಾದ ಪರಿಸ್ಥಿತಿಯನ್ನೂ ಗಮನಿಸಿದರೆ ಅಂದು ಆಡಳಿತವನ್ನು ನಡೆಸತಕ್ಕಂಥ ಸರ್ಕಾರದಲ್ಲಿ ಬೇರೆ ವಿಧವಾದ ಆಡಳಿತವನ್ನು ನಡೆಸುವ ಪದ್ಧತಿಯೂ ಜಾರಿಯಿಲ್ಲಿತ್ತು.

(ಶ್ರಿ ಕೆ. ಪುಟ್ಟಸ್ವಾಮಿ)

1950 ರಲ್ಲಿ ನಮ್ಮ ರಾಜ್ಯಾಂಗ ಶಾಸನದಲ್ಲಿ ಕೂಡ ಅಲ್ಲಿಯ ವಿಶೇಷ ಪರಿಸ್ಥಿತಿಯನ್ನು ಮನಗಂಡು ಅಲ್ಲಿಗೆ ವಿಶೇಷವಾದ, ಆ ಭಾಗಕ್ಕೆ ಅನ್ವಯವಾಗತಕ್ಕ ಕೆಲವು ವಿಧಾಯಕಗಳು ಈಗಾಗಲೇ ಅಡಕವಾಗಿವೆ. ರಾಜ್ಯಾಂಗದ 22ನೇ ತಿದ್ದುಪಡಿಯನ್ನು ಒಪ್ಪುವುದರಿಂದ ಅದು ಪಾರ್ಲಮೆಂಟಿಗೆ ಕೆಲವು ಅಧಿಕಾರಗಳನ್ನು ಕೊಡುತ್ತದೆ. ಆ ರಾಜ್ಯಕ್ಕೆ ಯಾವ ಯಾವ ಅಧಿಕಾರವನ್ನು ಕೊಡಬೇಕು, ಅಧಿಕಾರವನ್ನು ಯಾವ ರೀತಿ ನಿರ್ವಹಣೆ ಮಾಡಬೇಕು, ಅಲ್ಲಿ ಒಂದು ಶಾಸನಸಭೆ ಇರಬೇಕು, ಶಾಸನ ಸಭೆಯ ಹತೋಟಿಗೆ ಒಳಪಟ್ಟು ಕಾರ್ಯ ಮಾಡತಕ್ಕ ಒಂದು ಮಂತ್ರಿಮಂಡಲವಿರಬೇಕು ಎನ್ನುವುದನ್ನು ನಿರ್ಧಾರ ಮಾಡಿದ್ದಾರೆ. ಆ ಭಾಗದ ಜನರ ಆಚಾರಗಳು ಬೇರೆ ಮತ್ತು ಅವರ ನಡೆನುಡಿಗಳು ಬೇರೆಯಾಗಿವೆ. ಆಸ್ಸಾಂ ಪ್ರಾಂತದ ಒಳಗೆ ತಮ್ಮ ಸಮಸ್ಯೆಗಳನ್ನು ಪರಿಹಾರ ಮಾಡಿಕೊಳ್ಳುವುದಕ್ಕೆ ಅನುಕೂಲವಾಗುವಂತೆ ಒಂದು ವ್ಯವಸ್ಥೆ ಇರಬೇಕು ಎಂದು ಅಲ್ಲಿನ ಜನತೆ ಅಪೇಕ್ಷೆ ಪಟ್ಟಿದ್ದರಲ್ಲಿ ಅಸ್ವಾಭಾವಿಕವಾದುದೇನೂ ಇಲ್ಲ. ಅಲ್ಲಿರತಕ್ಕ ಪರಿಸ್ಥಿತಿ ಪಾರ್ಲಮೆಂಟಿನ ಗಮನಕ್ಕೆ ಬಂದುದರಿಂದ ಪಾರ್ಲಮೆಂಟಿನಲ್ಲಿನ ಮೂರನೇ ಎರಡು ಭಾಗದಷ್ಟು ಸದಸ್ಯರು ಈ ತಿದ್ದುಪಡಿಯನ್ನು ಒಪ್ಪಿದ್ದಾರೆ. ನಮ್ಮ ರಾಜ್ಯಾಂಗದಲ್ಲಿರುವ 368 ನೇ ಆರ್ಟಿಕಲ್‌ಗೆ ಪರೋಕ್ಷವಾಗಿ ತಿದ್ದುಪಡಿಯಾಗುವುದರಿಂದ ಮುಂದೆ ಮಾತುಬಂಧ ತಿದ್ದುಪಡಿಗೆ ರಾಜ್ಯ ಶಾಸನ ಸಭೆಗಳ ಒಪ್ಪಿಗೆ ಬೇಕಾಗಿರುವುದರಿಂದ ಅದನ್ನು ನಮ್ಮ ಶಾಸನ ಸಭೆಗಳ ಒಪ್ಪಿಗೆಗೆ ಕಳಿಸಿದ್ದಾರೆ. ರಾಷ್ಟ್ರದಲ್ಲಿರುವ ರಾಜ್ಯಗಳಲ್ಲಿ 50 ಭಾಗಕ್ಕಿಂತ ಹೆಚ್ಚಾಗಿ ಇದಕ್ಕೆ ಒಪ್ಪಿಗೆ ಕೊಟ್ಟ ನಂತರ ಅದನ್ನು ರಾಷ್ಟ್ರಾಧ್ಯಕ್ಷರ ಒಪ್ಪಿಗೆಗೆ ಇಂಡಿಯಾ ಸರ್ಕಾರದವರು ಕಳಿಸಿಕೊಡುತ್ತಾರೆ.

ಮಾನ್ಯ ಸದಸ್ಯರೆಲ್ಲರಿಗೂ ತಿಳಿದಿರುವಂತೆ ಈಗ ನಮ್ಮ ದೇಶದಲ್ಲಿ ಎಲ್ಲ ರಾಜ್ಯಗಳಲ್ಲಿಯೂ ವಿಧಾನ ಸಭೆಗಳು ನಡೆಯುತ್ತಿವೆ. ಇಂಥದೇ ನಿರ್ಣಯವನ್ನು ಅನೇಕ ರಾಜ್ಯಗಳಲ್ಲಿ ಒಪ್ಪಿ ಅದನ್ನು ಇಂಡಿಯಾ ಸರ್ಕಾರಕ್ಕೆ ಕಳಿಸಿಕೊಡುವಂಥದ್ದಿದೆ. ಬಹಳ ಮುಖ್ಯವಾಗಿ ಆಸ್ಸಾಂ ರಾಜ್ಯದಲ್ಲಿ ಎಲ್ಲ ಭಾಗದ ಜನರಲ್ಲಿಯೂ ನೆಮ್ಮದಿ ಇರಬೇಕಾದ ದೃಷ್ಟಿಯಿಂದ ನಮ್ಮ ದೇಶದ ರಕ್ಷಣಾ ದೃಷ್ಟಿಯಿಂದ ಗಡಿನಾಡಿನಲ್ಲಿ ವಾಸವಾಡತಕ್ಕ ಜನರು ನೆಮ್ಮದಿಯಿಂದ ಇರುವುದಕ್ಕೆ ಅವಕಾಶ ಮಾಡಿ ಕೊಡಬೇಕಾದ್ದು ನಮ್ಮ ಕರ್ತವ್ಯ. ಆ ಕಾರಣದಿಂದ ಈ ನಿರ್ಣಯವನ್ನು ಒಪ್ಪಬೇಕೆಂದು ನಾನು ಈ ಸಭೆಯಲ್ಲಿ ವಿನಂತಿಮಾಡಿಕೊಳ್ಳುತ್ತಿದ್ದೇನೆ.

ಮಾನ್ಯ ಸದಸ್ಯರಾದ ಹುಚ್ಚಮಾಸ್ತಿ ಗೌಡರು ಎತ್ತಿರುವ ವಿಷಯಗಳಿಗೆ ಏನು ಜವಾಬು ಎಂದು ಕೇಳುತ್ತಿದ್ದಾರೆ. ಯಾವುದೇ ಒಂದು ನಿರ್ಣಯ ಬಂದರೂ ಕೂಡ ಆ ನಿರ್ಣಯದ ಚರ್ಚೆಯಾವ ಕಕ್ಷೆಯಲ್ಲಿರಬೇಕು, ನಿರ್ಣಯದಲ್ಲಿ ಯಾವ ವಿಚಾರವನ್ನು ಎತ್ತುತ್ತಾರೋ ಅದಕ್ಕೆ ಸಂಬಂಧಪಟ್ಟ ವಿಚಾರಗಳನ್ನು ಮಾತ್ರ ಪ್ರಸ್ತಾಪ ಮಾಡಬೇಕು. ಮಾನ್ಯ ಸದಸ್ಯರು ಮಾತನಾಡುತ್ತ ಅನೇಕ ವಿಚಾರಗಳನ್ನು ಪ್ರಸ್ತಾಪ ಮಾಡಿದ್ದಾರೆ, ಬಹಳ ಚರ್ಚಾಸ್ಪದವಾದ ವಿಚಾರಗಳನ್ನು ಎತ್ತಿದ್ದಾರೆ. ನಾನು ಕೇವಲ ಐದು ಹತ್ತು ನಿಮಿಷಗಳಲ್ಲಿ ಅವರು ಹೇಳಿದಂಥ ವಿಚಾರಗಳಿಗೆ ಪರಿಣಾಮಕಾರಿಯಾದ ಉತ್ತರವನ್ನು ಕೊಡುತ್ತೇನೆಂದು ಭಾವನೆ ಮಾಡಿಕೊಂಡಿಲ್ಲ. ಆ ವಿಚಾರ ಈ ಹೊತ್ತಲ್ಲ ನಾಳೆ ಬರುತ್ತದೆ. ಅವರು ಕಾಲು ಕೆರೆಯುತ್ತಿದ್ದಾರೆ. ಆ ವಿಚಾರ ಬಂದಾಗ ಆದಕ್ಕೆ ಉತ್ತರ ಕೊಡಬಹುದು. ಈ ವಿಚಾರದಲ್ಲಿ ಮಾನ್ಯ ಮುಖ್ಯ ಮಂತ್ರಿಗಳು ಈಗಾಗಲೇ ಹೇಳಿದ್ದಾರೆ, ಈ ತರಹ ಆಪಾದನೆಗಳಿಗೆ ಯಾವ ಅಂಕ ಆಂಶಗಳ ಅವಶ್ಯಕತೆ ಇದೆಯೋ ಅದನ್ನು ಸಂಗ್ರಹಿಸುತ್ತಿದ್ದೇನೆ ಎಂದು ಅವರು ಹಲವಾರು ಬಾರಿ ಹೇಳಿದ್ದಾರೆ.

ಶ್ರೀ ಎಚ್. ಎನ್. ನಂಜೇಗೌಡ.—ಅವೆಲ್ಲ ಬೊ ಗಸ್ ಅಂಕ ಆಂಶಗಳು ಎನ್ನುವ ದೂರು ಇಲ್ಲವೇ ?

ಶ್ರೀ ಕೆ. ಪುಟ್ಟಸ್ವಾಮಿ.—ಅಂಕ ಆಂಶಗಳನ್ನು ಸಂಗ್ರಹ ಮಾಡಿದ ಮೇಲೆ ಉಪಯುಕ್ತವಾದ ಚರ್ಚೆಯಾಗುವುದಕ್ಕೆ ಅವಕಾಶವಾಗುತ್ತದೆ.

ಮಾನ್ಯ ನಂಜೇಗೌಡರು ಅದೆಲ್ಲ ಬೋಗಸ್ ಅಂಕ ಆಂಶಗಳು ಎಂದು ಹೇಳಿದರು. ತಲೆ ಬುರುಡೆಯನ್ನು ತಂದಿಟ್ಟರೂ ಅದು ಸೋರೆ ಬುರುಡೆ ಎಂದರೆ, ನಾನು ಏನೂ ಹೇಳುವುದಕ್ಕಾಗುವುದಿಲ್ಲ. ಎರಡು ಪ್ಲಸ್ ಎರಡು ನಾಲ್ಕು ಎಂದರೆ, ಅದನ್ನು ಯಾರು ಹೇಳಿದರು ಎಂದರೆ ಅದಕ್ಕೆ ನಾವು ಏನೂ ಹೇಳುವುದಕ್ಕಾಗುವುದಿಲ್ಲ. ಮಾನ್ಯ ಸದಸ್ಯರು ತಮ್ಮ ಜವಾಬ್ದಾರಿಯನ್ನು ಅರಿತು ಮಾತನಾಡಬೇಕು. ಅಂಕ ಆಂಶಗಳನ್ನು ಸಂಗ್ರಹಿಸಿ ಒದಗಿಸುವುದಕ್ಕೆ ಮುಂಚಿತವಾಗಿಯೇ

ಪೂರ್ವಭಾವಿಯಾಗಿ ಮಾನ್ಯ ಸನಸ್ಯರು ಬೇರೆ ಅಭಿಪ್ರಾಯವನ್ನು, ತೀರ್ಮಾನವನ್ನು ಕೊಡುವುದಾದರೆ ಅದಕ್ಕೆ ಏನು ಬೆರೆ ಎನ್ನುವುದನ್ನು ರಾಜ್ಯದ ಜನರು ಕಂಡುಕೊಳ್ಳಬಲ್ಲರು ಎಂದು ಮಾತ್ರ ಹೇಳುತ್ತೇನೆ.

ಈ ಸಭೆ ಈ ನಿರ್ಣಯಕ್ಕೆ ತನ್ನ ಸರ್ವಾನುಮತ ಒಪ್ಪಿಗೆಯನ್ನು ಕೊಡಬೇಕೆಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಈ ಥರಾವಿನಲ್ಲಿರುವಂತೆ ಆಡಳಿತ ಅಧಿಕಾರವನ್ನು ಕೊಟ್ಟರೂ ಕೂಡ ಪರಮಾಡಳಿತಾಧಿಕಾರವನ್ನು ಕೊಡದೆ ಇರುವುದರಿಂದ ಅಲ್ಲಿರತಕ್ಕ ಜನ ತಮ್ಮ ವಿಷಯದಲ್ಲಿ ಕೇಂದ್ರ ಸರ್ಕಾರಕ್ಕೆ ಮತ್ತು ರಾಷ್ಟ್ರದ ಇತರ ಭಾಗದ ಪ್ರತಿನಿಧಿಗಳಿಗೆ ಅನುಮಾನವಿದೆ ಎಂದು ತಿಳಿದುಕೊಳ್ಳುವುದಿಲ್ಲವೇ ! ಪೂರ್ಣಾಧಿಕಾರವನ್ನು ಕೊಡುವುದಕ್ಕೆ ಏಕೆ ಹಿಂದು ಮುಂದು ನೋಡುತ್ತಿದ್ದೀರಿ ?

ಈ ರಾಷ್ಟ್ರ ಸ್ವತಂತ್ರವಾಗುವುದಕ್ಕೆ ಮುಂಚಿತವಾಗಿ ಅಸ್ಸಾಂ ಪ್ರದೇಶದ ಕೆಲವು ಜಿಲ್ಲೆಗಳಲ್ಲಿ ವಿಶೇಷ ಪರಿಸ್ಥಿತಿ ಇತ್ತು, ಆ ವಿಶೇಷ ಪರಿಸ್ಥಿತಿಯನ್ನು ಗಮನದಲ್ಲಿಟ್ಟುಕೊಂಡು ಅವರನ್ನು ಒಟ್ಟಿಗೆ ತಂದು ಅವರಿಗೆ ಹೆಚ್ಚು ಅಧಿಕಾರವನ್ನು ಕೊಡಬೇಕು. ಅದರಿಂದ ರಾಷ್ಟ್ರದ ಐಕ್ಯತೆಗೆ ಸಹಾಯವಾಗುತ್ತದೆ, ಅದಕ್ಕಾಗಿ ಅಲ್ಲಿನ ಜನರ ಬೆಂಬಲವನ್ನು ಪಡೆಯಬೇಕು ಎನ್ನುವ ಉದ್ದೇಶದಿಂದ ಈ ತಿಮ್ಮಪಡಿಯನ್ನು ಮಾಡರಾಗಿದೆ ಎಂದು ಹೇಳಿದರು. ರಾಜ್ಯಗಳ ಪುನರ್ವಿಂಗಡಣೆ ಆದಾಗ ಈ ರಾಷ್ಟ್ರದಲ್ಲಿ ಕೂಡ ಅನೇಕ ರಾಜ್ಯಗಳಲ್ಲಿ ಅನೇಕ ಸಮಸ್ಯೆಗಳು ಮುಂದೆ ಉಂಟಾಗುತ್ತವೆ, ಈ ಸಮಸ್ಯೆಗಳುಂಟಾದಾಗ ಇವುಗಳನ್ನು ಬಗೆಹರಿಸುವುದು ಅವಶ್ಯಕ ಎನ್ನುವ ಕೆಲವು ಅಭಿಪ್ರಾಯಗಳನ್ನು ರಾಜ್ಯ ಪುನರ್ವಿಂಗಡಣಾ ಆಯೋಗದವರು ಹೇಳಿದ್ದಾರೆ. ಅಂಥ ಪರಿಸ್ಥಿತಿ ಮೈಸೂರು ರಾಜ್ಯದಲ್ಲಿ ಉಂಟಾಗಿದೆಯೋ ಇಲ್ಲವೊ !

Mr. SPEAKER.—I do not permit the second part of the question whether a situation has arisen in Mysore State. It is altogether a different thing. Because the hon. Member raised certain points, the hon. Minister has replied to them such passing references are permitted. The point here is creating an autonomous State within the State of Assam. The hon. member can ask anything regarding that, other things cannot be permitted.

Sri H. N. NANJE GOWDA.—Clarifications are asked within the purview of the same Constitution ?

Mr. SPEAKER.—I have ruled that it is not relevant.

ಶ್ರೀ ಎನ್.ಹುಚ್ಚಮಾಸ್ತಿಗೌಡ.—ಪ್ರಾದೇಶಿಕ ಅಸಮತೆ ಇಲ್ಲ ಆಥವಾ ಉಂಟು ಎನ್ನುವುದಕ್ಕೆ ಅಂಕಿಅಂಶಗಳನ್ನು ಒದಗಿಸುವುದಾಗಿ ರಾಜ್ಯದ ಮುಖ್ಯ ಮಂತ್ರಿಗಳು ಭರವಸೆಯನ್ನು, ಕಾಂಗ್ರೆಸ್ ಪಕ್ಷದಲ್ಲಿ ಯಾರೋ ಕೆಲವರು ಆ ಅಭಿಪ್ರಾಯವನ್ನು ವ್ಯಕ್ತ ಪಡಿಸಿದ ನಂದರ್ಭದಲ್ಲಿ ಕಾಂಗ್ರೆಸ್‌ನವರಿಗೆ ಕೊಟ್ಟಿರುವುದು. ಅವರು ಈ ಸಭೆಗೆ ಏನು ಭರವಸೆಯನ್ನು ಕೊಟ್ಟಿದ್ದಾರೆ ? ಈ ಸಭೆಗೆ ಅವರು ಅಂಕಿ ಅಂಶಗಳನ್ನು ಕೊಡುತ್ತಾರೆ ಎನ್ನುವ ವಿಶ್ವಾಸ ನಮಗಿಲ್ಲ. ಈ ಸಭೆಗೆ ಅಂಕಿ ಅಂಶಗಳನ್ನು ಒದಗಿಸಿ ಕೊಟ್ಟು ಈ ರಾಜ್ಯದಲ್ಲಿ ಉಂಟಾಗಿರತಕ್ಕ ಭಿನ್ನಾಭಿಪ್ರಾಯಗಳೇನಿವೆ ಅದನ್ನು ಹೋಗರಾಡಿಸುವುದಕ್ಕೆ ಸರ್ಕಾರ ಪ್ರಯತ್ನ ಮಾಡುತ್ತದೆ ಎನ್ನುವ ಭರವಸೆಯನ್ನು ಮಾನ್ಯ ಮಂತ್ರಿಗಳು ಕೊಡುತ್ತಾರೆಯೇ ?

Sri B. B. SAYANAK.—May I know whether this autonomous hill State will be given the power of law and order ?

Mr. SPEAKER.—It is clear from the Bill itself.

6-00 P.M.

ಶ್ರೀ ಕೆ. ಪುಟ್ಟಸ್ವಾಮಿ.—ಮಾನ್ಯ ಸದಸ್ಯರನೇಕರಿಗೆ ನಾನು ಉತ್ತರ ಹೇಳಿದಾಗ ಹೇಳಿದ ವಿಚಾರ ಸ್ಪಷ್ಟವಾಗದಿರಬಹುದು. ಇದಕ್ಕೆ ಉಳಿದ ಎಲ್ಲಾ ರಾಜ್ಯಗಳಿಗೂ ಇರುವಷ್ಟು ಅಧಿಕಾರ ಕೊಡದಿದ್ದರೆ ಅನಮಾಧಾನವಾಗುವುದಿಲ್ಲವೇ ಎಂಬುದು ಮೊದಲನೆಯ ಪ್ರಶ್ನೆ, ಅದನ್ನು ಹೇಳುತ್ತೇನೆ. ಆಗರೇ ಹೇಳಿದಂತೆ ಈ ವಿಚಾರ ಅನೇಕ ಮಟ್ಟಗಳಲ್ಲಿ ಚರ್ಚೆಯಾಗಿದೆ, ಇಂಡಿಯಾ ಸರಕಾರಕ್ಕೆ

(ಅಲಂಕಾರ ಗ್ರಂಥಾಲಯ)
ವಿಶ್ವವಿದ್ಯಾಲಯ Accession No....
ದಿನಾಂಕ Date

(ಶ್ರೀ ಕೆ. ಪುಟ್ಟಸ್ವಾಮಿ)

ಸ್ಥಾನಮಾನ ಕೊಡಬೇಕೆಂದು ಅನೇಕ ಡೆಲಿಗೇಷನ್ನುಗಳು ಹೋಗಿದ್ದುವು, ಪಟಾಸ್ಕರ್ ವರದಿ ಕೂಡ ಇದೆ, ಎಲ್ಲಾ ಅಂಕಿಅಂಶ ಅವರಲ್ಲಿತ್ತು. ಗುಡ್ಡಗಾಡಿನ ಜನರು, ಅನ್ಯಾಂ ಸರಕಾರದವರು ಮತ್ತು ಅನ್ಯಾಂ ರಾಜ್ಯದ ಸಾರ್ವಜನಿಕರು ಇಂಡಿಯಾ ಸರಕಾರದವರು ಎಲ್ಲಾ ಕೂಡಿ ಒಂದು ತೀರ್ಮಾನ ಮಾಡಿದ್ದಾರೆ. ಒಂದು ಒಮ್ಮತವಾದ ತೀರ್ಮಾನಮಾಡಿದ್ದಾರೆ. ಈ ಒಂದು ರಾಜ್ಯಾಂಗ ಶಾಸನದ ತಿದ್ದುಪಡಿಯಾದ ಮೇಲೆ ಪಾರ್ಲಿಮೆಂಟಿನಲ್ಲಿ ಕಾನೂನು ಮೂಲಕ ಅನ್ಯಾಂ ರಾಜ್ಯದೊಳಗೆ ಒಂದು ರಾಜ್ಯವನ್ನು ನಿರ್ಮಾಣಮಾಡಿ ಅದಕ್ಕೆ ರಾಜ್ಯ ನಿರ್ವಹಿಸುವ ಕೆಲವು ಅಧಿಕಾರಿಗಳನ್ನು ಕೊಡಬೇಕೆಂದು ಒಪ್ಪಿಗೆಯಾಗಿದೆ. ಇದಕ್ಕೆ ಎಲ್ಲರ ಸಮ್ಮತಿಯನ್ನೂ ಪಡೆಯಲಾಗಿರುವುದರಿಂದ ಇದರಲ್ಲಿ ಯಾವ ಅಪನಂಬಿಕೆಯೂ ಇಲ್ಲ, ಇದು ಎಲ್ಲರ ವಿಶ್ವಾಸಕ್ಕೆ ಪಾತ್ರವಾಗಿದೆ. ಈಗ ಆಗಿರುವ ತೀರ್ಮಾನವನ್ನು ಅಸ್ತಿತ್ವಕ್ಕೆ ತರುವುದಕ್ಕೆ, ಜಾರಿಗೆ ತರುವುದಕ್ಕೆ ಅವಶ್ಯಕವಾದ ರಾಜ್ಯಾಂಗ ತಿದ್ದುಪಡಿಯಾಗಬೇಕು, ತದನಂತರ ಕಾನೂನಾಗಬೇಕು, ಹಾಗೆ ಮಾಡದಿದ್ದರೆ ಅಪನಂಬಿಕೆ ಬರುತ್ತದೆ. ಆ ಕಾರಣದಿಂದ ಶ್ರೀ ಹುಚ್ಚಮಾಸ್ತಿಗೌಡರು ಎತ್ತಿರುವ ಆಕ್ಷೇಪಣೆಯಲ್ಲಿ ಯಾವ ವಿಧವಾದ ತಿರುಳೂ ಇಲ್ಲ ಎಂದು ಭಾವಿಸುತ್ತೇನೆ.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಇನ್ನೊಂದು ಪ್ರಶ್ನೆ ನಾನು ಕೇಳಿದ್ದೆ, ಅದಕ್ಕೆ ಉತ್ತರ ಹೇಳಬೇಕು.

ಶ್ರೀ ಕೆ. ಪುಟ್ಟಸ್ವಾಮಿ.—ಮುಖ್ಯ ಮಂತ್ರಿಗಳು ಸಭೆಯಲ್ಲಿರುವುದರಿಂದ ಅವರು ಸ್ಪಷ್ಟವಾಗಿ ಹೇಳಬಹುದು. ಆದರೆ ನಾನು ಚರ್ಚೆ ಕೇಳಿದ್ದೇನೆ, ಮುಖ್ಯ ಮಂತ್ರಿಗಳು ಕೇಳುವುದಕ್ಕೆ ಅವಕಾಶವಾಗಿಲ್ಲ. ಆ ಕಾರಣದಿಂದ ನಾನೇ ಹೇಳುತ್ತೇನೆ. ಈ ವಿಚಾರ ದೇಶದ ಜನರಿಗೆ ಗೊತ್ತಿದೆ. ನಮ್ಮ ಪಕ್ಷದಲ್ಲಿ ಚರ್ಚೆಯಾದಾಗ ಈ ರಾಜ್ಯದಲ್ಲಿ ಕೆಲವರು ಅಸಮಾಧಾನ ಪಡುತ್ತಿದ್ದಾರೆ, ಆ ಅಸಮಾಧಾನದಲ್ಲಿ ನಿಜವಾಗಿ ತಿರುಳಿದೆಯೇ, ಇಲ್ಲವೇ ಎಂಬುದು ಸ್ಪಷ್ಟವಾಗಬೇಕಾದರೆ ಅಂಕಿಅಂಶ ಸಂಗ್ರಹವಾಗಬೇಕು, ಆ ಕಾರಣದಿಂದ ಸಂಗ್ರಹಿಸಲು ಕಾರ್ಯಕ್ರಮ ತೆಗೆದುಕೊಳ್ಳಲಾಗಿದೆ ಎಂದು ಮುಖ್ಯ ಮಂತ್ರಿಗಳು ಸಾರ್ವಜನಿಕವಾಗಿ ಹಲವಾರು ಬಾರಿ ತಮ್ಮ ಅಭಿಪ್ರಾಯವನ್ನು ವ್ಯಕ್ತಮಾಡಿದ್ದಾರೆ. ಅದುದರಿಂದ ಇದು ದೇಶದ ಜನರಿಗೆ ಕೊಟ್ಟ ಮಾತು ಎಂದು ವಿನಂತಿ ಮಾಡುತ್ತೇನೆ.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ನನ್ನ ಇನ್ನೊಂದು ಪ್ರಶ್ನೆಗೆ ಉತ್ತರ ಕೊಡಲಿಲ್ಲ. ಅನ್ಯಾಂ ರಾಜ್ಯದ ಗಿರಿ ಜಿಲ್ಲೆಯಲ್ಲಿ ವಿಶೇಷ ಪರಿಸ್ಥಿತಿಯಿತ್ತು, ಅದುದರಿಂದ ಕೇಂದ್ರ ಸರ್ಕಾರದವರು ಈ ತೀರ್ಮಾನಮಾಡಿದ್ದಾರೆ ಎಂದು ಹೇಳಿದರು. ರಾಜ್ಯಗಳ ಪುನರ್ವಿಂಗಡಣೆಯಾದಮೇಲೆ ಮೈಸೂರು ರಾಜ್ಯದಲ್ಲೂ ಕೂಡ ವಿಶೇಷ ಪರಿಸ್ಥಿತಿ ಉಂಟಾಗಿಲ್ಲವೇ? ಆಗಿದ್ದರೆ ಇಲ್ಲೂ ಕೂಡ ಆ ರೀತಿ ಮಾಡುವುದಕ್ಕಾಗುವುದಿಲ್ಲವೇ?

ಶ್ರೀ ಕೆ. ಪುಟ್ಟಸ್ವಾಮಿ.—ಅಲ್ಲಿರುವ ಪರಿಸ್ಥಿತಿ ಇಲ್ಲಿಲ್ಲ.

Mr. SPEAKER.—The question is :

"That this House ratifies the amendments to the Constitution of India falling within the purview of the proviso to article 368 thereof, proposed to be made by the Constitution (Twenty-Second Amentment) Bill, 1969 as passed by the two Houses of Parliament."

The motion was adopted.

Mr. SPEAKER.—The House now adjourned to meet at 1 P.M. on Monday, the 18th August 1969.

The House adjourned at Ten Minutes past Six of the Clock to meet again at One of the Clock on Monday, the 18th August 1969.

WD 13181—GPB—600—27-9-1969